MR. SPEAKER.—The question is.—

"That the Mangalore Port Trust (Repeal) Bill, 1980 be taken into consideration."

The motion was adopted.

CLAUSES 2 TO 6.

MR. SPEAKER. The question is.—

"That Clause 2 to 6, both inclusive, do stand part of the Bill."

The motion was adopted.

Clause 2 to 6, both inclusive were added to the Bill.

CLAUSE 1

MR. SPEAKER. The question is.—

"That Clause 1, the long Title, the preamble and the Enacting formula do stand part of the Bill."

The motion was adopted.

Clause 1, the long Title, the preamble and the Enacting formala were added to the Bill.

Motion To Pass

SRI D.B. PAWAR (Minister of State for Fisheries, ports and Inland Transport). —Sir, I move.

"That the Mangalore Port Trust (Repeal) Bill, 1980 be passed.'

MR SPEAKER.—The question is:

"That the Mangalore Port Trust (Repeal) Bill, 1980 be passed.

The Motion was adopted and the Bill was passed.

Motion of Thanks to Governors' Address

(Dabate Continued)

ಶ್ರೀ ಜಿ. ಬಸವಣ್ಣಪ್ಪ(ಹೊಳೆಹೊನ್ನೂರು) .— ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ ಮತ್ತು ಮುಂದೆ ತೆಗೆದುಕೊಳ್ಳಬೇಕಾದ ನಿಲುವಿನ ಬಗ್ಗೆ ಮಾನ್ಯ ರಾಜ್ಯಪಾಲರವರು ಮಾಡಿರುವ ಭಾಷಣವನ್ನು ಸ್ವಾಗತಿಸುತ್ತಾ ನಾನು ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಲು ನಿಂತಿದ್ದೇನೆ. ನಿನ್ನೆ ದಿವಸ ಮಾನ್ಯ ಬಸವಲಿಂಗಪ್ಪನವರು ಭಾಷಣ ಮಾಡುತ್ತಾ ಸುಮಾರು ಎರಡು ಗಂಟೆಗಳ ಕಾಲ ಸಭೆಯ ಗಮನವನ್ನು ಸೆಳೆದಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವ್ಯಕ್ತಿಗೆ ಹೆಚ್ಚು ಪ್ರಾಧಾನ್ಯತೆ ಕೊಡಲಾಗಿದೆ. ದೇಶದಲ್ಲಿ ವ್ಯಕ್ತಿಪೂಜೆ ನಡೆಯುತ್ತಿದೆ. ಅದು ಸರಿಯಲ್ಲವೆಂದು ಬಹಳ ದೀರ್ಘವಾಗಿ

ಅವರು ಮಾತನಾಡಿದ್ದಾರೆ. ಪ್ರಜಾಪ್ರಭುತ್ವ ಪದ್ಧತಿಯನ್ನು ಒಪ್ಪಿರುವ ಈ ದೇಶದಲ್ಲಿ ಪ್ರಜಾಪ್ರಭುತ್ವ ನೀತಿಯನ್ನು ಅನುಸರಿಸುವುದಲ್ಲದೆ ಒಂದು ಪಕ್ಷದ ಸಿದ್ಧಾಂತಕ್ಕೆ ಮತ್ತು ಪ್ರಣಾಳಿಕೆಗೆ ಬದ್ಧರಾಗಿರಬೇಕಾದುದು ಆದ್ಯ ಕರ್ತವ್ಯಗಳಲ್ಲೊಂದಾಗಿದೆ. ಜೊತೆಗೆ ಪಕ್ಷದ ನಾಯಕರನ್ನು ಗೌರವಿಸುವುದೂ, ಅವರು ನಮ್ಮ ನಾಯಕರೆಂದು ಹೇಳುವುದೂ ಮತ್ತು ಪಕ್ಷದ ಧ್ಯೇಯ ಧೋರಣೆಗಳನ್ನು ಎತ್ತಿಹಿಡಿಯುವುದೂ ಪ್ರಜಾಪ್ರಭುತ್ವದ ಲಕ್ಷಣವಾಗಿದೆ. ಅದನ್ನೇ ಮಾನ್ಯ ಬಸವಲಿಂಗಪ್ಪನವರು ವ್ಯಕ್ತಿಪೂಜೆ ಎಂದು ಕರೆದಿರುವುದನ್ನು ನಾನು ವಿರೋಧಿಸುತ್ತೇನೆ. ನಮ್ಮ ಪಕ್ಷದ ನಾಯಕರಾದ ಶ್ರೀಮಾನ್ ಗುಂಡೂರಾಯರನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ನಾಯಕರನ್ನಾಗಿ ಚುನಾಯಿಸಿಲ್ಲ, ಯಾರೋ ಹೇಳಿದರು ಎಂದು ಶಾಸಕರು ತಮ್ಮ ಕರ್ತವ್ಯವನ್ನು ಮರೆತು ಅವರನ್ನು ನಾಯಕರನ್ನಾಗಿ ಆರಿಸಿದ್ದಾರೆ. ಎಂದು ಹೇಳಿದರು. ಅವರು ಹಾಗೆ ಹೇಳುವುದು ಸರಿಯಲ್ಲ. ಅವರನ್ನು ನಾವು ಪ್ರಜಾಸತ್ತಾತ್ಮಕವಾದ ರೀತಿಯಲ್ಲೇ ಚುನಾಯಿಸಿದ್ದೇವೆ. ಶಾಸಕಾಂಗ ಪಕ್ಷದ ಸಭೆಯಲ್ಲಿ ಶ್ರೀಮಾನ್ ಗುಂಡೂರಾಯರನ್ನು ಪಕ್ಷದ ನಾಯಕರನ್ನಾಗಿ ಚುನಾಯಿಸಬೇಕೆನ್ನುವ ಬಗೆ ಸೂಚನೆಯನ್ನು ಮಂಡಿಸಿ ಅದನ್ನು ಅನುಮೋದಿಸಿ ಅವರನ್ನು ಸರ್ವಾನುಮತದಿಂದ ಆರಿಸಲಾಗಿದೆ. ಪ್ರಜಾಪ್ರಭುತ್ವ ತತ್ವಗಳನ್ನೂ, ನೀತಿಗಳನ್ನೂ ಮತ್ತು ರಾಜ್ಯಾಂಗ ಕ್ರಮಗಳನ್ನೂ ಆಧಾರವಾಗಿಟ್ಟುಕೊಂಡು ಅವರನ್ನು ಪಕ್ಷದ ನಾಯಕರನ್ನಾಗಿ ಆರಿಸಲಾಗಿದೆ. ಅದರಂತೆ ಅವರು ಇಂದು ಮುಖ್ಯ ಮಂತ್ರಿಗಳಾಗಿದ್ದಾರೆ. ಆದುದರಿಂದ, ಮಾನ್ಯ ಬಸವಲಿಂಗಪ್ಪನವರು ಈ ಕುರಿತು ಮಾಡಿರುವ ಆಪಾದನೆ ಸತ್ಯಕ್ಕೆ ದೂರವಾದದ್ದೆಂದು ಹೇಳಬಯಸುತ್ತೇನೆ.

ಈ ರಾಜ್ಯದ ಮುಂದಿನ ಮುಖ್ಯಮಂತ್ರಿ ಯಾರು ಎನ್ನುವುದನ್ನು ನಾನು ಆರುತಿಂಗಳ ಹಿಂದೆಯೇ ತಿಳಿದುಕೊಂಡಿದ್ದೆ, ಶ್ರೀ ಗುಂಡೂರಾಯರನ್ನೇ ಮುಖ್ಯ ಮಂತ್ರಿಯನ್ನಾಗಿ ಮಾಡಬೇಕೆಂಬ ಮನಸ್ಸು ಶ್ರೀಮತಿ ಇಂದಿರಾಗಾಂಧಿಯವರಿಗಿತ್ತು, ಆದ್ದರಿಂದಲೇ ನಾನು ಈ ಕಡೆ ಇದ್ದೇನೆ ಎನ್ನುವ ಮಾತನ್ನು ಮಾನ್ಯ ಬಸವಲಿಂಗಪ್ಪನವರು ಹೇಳಿದ್ದಾರೆ. ಇದು ಒಬ್ಬ ನುರಿತ ರಾಜಕಾರಣಿ ಆಡುವ ಮಾತಲ್ಲ ಎಂದು ನಾನು ಹೇಳುತ್ತೇನೆ. ಅವರಿಗೆ ಲಾಭವಿದ್ದರೆ ಇಲ್ಲಿ ಇರುವುದು, ಲಾಭವಿಲ್ಲದಿದ್ದರೆ ಆ ಕಡೆ ಇರುವುದು ಈ ನಿಲುವು ಪ್ರಜಾಪ್ರಭುತ್ವ ತತ್ವಕ್ಕೆ ಮತ್ತು ಸಿದ್ಧಾಂತಕ್ಕೆ ವಿರೋಧವಾಗಿದೆ.

ಶ್ರೀ ಆರ್. ಎಸ್. ಪಾಟೀಲ್ .— ಮಾನ್ಯ ಸದಸ್ಯರು ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಮಾನ್ಯ ಬಸವಲಿಂಗಪ್ಪನವರು ಆ ರೀತಿ ಹೇಳಿಲ್ಲ.

ಶ್ರೀ ಜಿ. ಬಸವಣ್ಣಪ್ಪ.—ಸಭೆಯ ನಡವಳಿಕೆಗಳನ್ನು ತೆಗೆದು ನೋಡಿ, ಅವರು ಹಾಗೇ ಹೇಳಿದ್ದಾರೆ. ಅದನ್ನು ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಕರ್ನಾಟಕ ಜನತೆಯ ನಾಡಿಯ ಮಿಡಿತವನ್ನು ಅರ್ಥ ಮಾಡಿಕೊಂಡು, ಅವರ ಕನಿಷ್ಟ ಅವಶ್ಯಕತೆಗಳನ್ನು ಒದಗಿಸಿಕೊಡುವುದರಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬ ಬಗ್ಗೆ ಮಾನ್ಯ ರಾಜ್ಯಪಾಲರು ಸ್ಪಷ್ಟವಾಗಿ ಹೇಳಿದ್ದಾರೆ. ಈ ಸಭೆಯ ಮುಂದೆ ನಾನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಅವಶ್ಯಕ ವಸ್ತುಗಳ ಅಭಾವವಿದೆ. ಸಕ್ಕರೆಯ ಬೆಲೆ ಕೇಜಿಗೆ ೮ ರೂಪಾಯಿ ಆಗಿದೆ. ಇದಕ್ಕೆ ಕಾರಣವೇನೆಂದು ಸರ್ಕಾರದವರು ಯೋಚನೆ ಮಾಡಬೇಕು. ಕಬ್ಬನ್ನು ಬೆಳೆಯುವವನಿಂದ ಹಿಡಿದು ಸಕ್ಕರೆ ತಯಾರಿಸುವ ಕಾರ್ಖಾನೆ ಮತ್ತು ಮಾರುಕಟ್ಟೆಯಲ್ಲಿ ಮಾರುವವರಿಗೆ ಆಗುವ ಖರ್ಚನ್ನು ತೆಗೆದುಕೊಂಡರೆ ಕೇಜಿ ಸಕ್ಕರೆಗೆ ೩ ರೂಪಾಯಿ ಮೇಲೆ ಹೋಗುವುದಿಲ್ಲ. ಆದರೆ ಸಕ್ಕರೆ ಬೆಲೆ ಇಂದು ಮಾರುಕಟ್ಟೆಯಲ್ಲಿ ೮ ರೂಪಾಯಿನಷ್ಟಾಗಿದೆ. ಇದರಿಂದ ಕಬ್ಬು ಬೆಳೆಗಾರನಿಗೂ ಲಾಭವಿಲ್ಲ. ಬಳಕೆದಾರನಿಗೂ ಲಾಭವಿಲ್ಲ. ಆದರೆ, ಮಧ್ಯವರ್ತಿ ಮಾತ್ರ ಒಂದಕ್ಕೆ ನಾಲ್ಕರಷ್ಟು ಲಾಭ ಪಡೆಯುತ್ತಿದ್ದಾನೆ. ಆದುದರಿಂದ, ಆದಷ್ಟು ಜಾಗ್ರತೆ ಬಡ ಜನತೆಗೆ ಅವಶ್ಯ ವಸ್ತುಗಳನ್ನು ಒದಗಿಸುವ ಬಗ್ಗೆ ಸರ್ಕಾರ ತೀವ್ರ ಕ್ರಮ ಕೈಗೊಳ್ಳಬೇಕು. ಅಕ್ರಮ ದಾಸ್ತಾನುಗಾರರನ್ನು ಮತ್ತು ಕಳ್ಳಸಾಗಾಣಿಕೆದಾರರನ್ನೂ ಹಿಡಿದು, ಅವರ ಮೇಲೆ ಉಗ್ರವಾದ ಕಾನೂನು ಕ್ರಮ ಕೈಗೊಂಡು, ಆಹಾರ ಸಾಮಾಗ್ರಿಗಳನ್ನು ಕಡಿಮೆ ದರದಲ್ಲಿ ಜನಸಾಮಾನ್ಯರಿಗೆ ಮುಟ್ಟಿಸಬೇಕು. ಇದಕ್ಕಾಗಿ, ಸಹಕಾರ ಮತ್ತು ಆಹಾರ ಇಲಾಖೆಯನ್ನು ಚುರುಕುಗೊಳಿಸಬೇಕೆಂದು ಹೇಳಬಯಸುತ್ತೇನೆ.

ಮಾನ್ಯ ರಾಜ್ಯಪಾಲರು ಗ್ರಾಮಾಂತರ ಪ್ರದೇಶಗಳ ಮತ್ತು ನಗರ ಪ್ರದೇಶಗಳ ಕುಡಿಯುವ ನೀರಿನ ಸಮಸ್ಯೆ ಕುರಿತು ಪ್ರಸ್ತಾಪ ಮಾಡಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಹೋಗಲಾಡಿಸಲು ಸವಿಸ್ತಾರವಾದ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡರೂ ಸಹ ಇನ್ನೂ ಹಲವಾರು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ.

ಮೊನ್ನೆ ತಾನೇ ಗುಲ್ಬರ್ಗ ಉಪಚುನಾವಣೆಯಲ್ಲಿ ಆ ಭಾಗದಲ್ಲಿ ಸಂಚಾರ ಮಾಡಿದ್ದೇನೆ. ಬಣಜಾರ ತಂಡ, ಬೋವಿ ಕಾಲೋನಿ ಹಾಗೂ ಹರಿಜನರ ಕಾಲೋನಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಿಲ್ಲದೆ ಬಹಳ ತೊಂದರೆ ಪಡುತ್ತಿದ್ದಾರೆ. ಅದೇ ರೀತಿ ಕರ್ನಾಟಕದ ಬಹುಭಾಗದಲ್ಲಿ ಕುಡಿಯುವ ನೀರಿನ ತೊಂದರೆಯಿರುವುದರಿಂದ ಸರ್ಕಾರ ಕನಿಷ್ಟ ಆವಶ್ಯಕತೆಯಾದ ಕುಡಿಯುವ ನೀರನ್ನು ಪ್ರತಿಯೊಂದು ಹಳ್ಳಿಗೂ ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಇವತ್ತು ಬೆಂಗಳೂರು ನಗರದಲ್ಲಿ ಕೂಡ ಕುಡಿಯುವನೀರಿನ ವ್ಯವಸ್ಥೆ ಬಹಳ ಕಠಿಣವಾಗಿದೆ. ಬೆಂಗಳೂರು ನಮ್ಮ ಕರ್ನಾಟಕ ರಾಜ್ಯದ ರಾಜಧಾನಿಯಾಗಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಸಿಗುವ ವ್ಯವಸ್ಥೆಗೊಳಿಸಬೇಕೆಂದು ಹೇಳುತ್ತೇನೆ. ಕಾವೇರಿ ಯೋಜನೆಯ ೨ನೇ ಹಂತವನ್ನು ೧೯೮೨ನೇ ಇಸವಿಯೊಳಗೆ ಮುಗಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಜನತಾ ಗೃಹ ನಿರ್ಮಾಣದ ಬಗ್ಗೆ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದ ಮುಖ್ಯ ರಸ್ತೆಗಳ ಆಜುಬಾಜಿನಲ್ಲಿ ಕಟ್ಟಿರತಕ್ಕ ಜನತಾ ಗೃಹಗಳು ಬಿದ್ದು ಹೋಗಿರುವದನ್ನು ಇವತ್ತು ನಾವುಗಳು ಕಣ್ಣಿನಿಂದ ಕಾಣಬಹುದು. ಬಡವರ ಬಗ್ಗೆ ಪ್ರಾಮಾಣಿಕವಾದ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಅವರುಗಳಿಗೆ ಕನಿಷ್ಟ ೨೦ ವರ್ಷಗಳ ಕಾಲ ಬಾಳತಕ್ಕ ಮನೆಗಳನ್ನು ಕಟ್ಟಿಸಿಕೊಡತಕ್ಕ ವ್ಯವಸ್ಥೆ ಮಾಡಬೇಕು, ಚುನಾವಣಾ ತಂತ್ರ ಮಾಡಿಕೊಂಡು ಹೋಗುವುದು ಸರಿಯಲ್ಲ, ರಚನಾತ್ಮಕವಾಗಿ ಬಡವರಿಗೆ ಅನುಕೂಲವಾಗುವ ರೀತಿಯಲ್ಲಿ ಜನತಾ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ. ಈ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ, ಹೊಳೆಯಲ್ಲಿ ಹೋಮ ಮಾಡಿದಂತೆ ಆಗಿದೆ. ಈಗ ಜನತಾ ಮನೆಗಳಿಗೆ ಕೊಡತಕ್ಕ ಹಣವನ್ನು ೩೦೦೦ ರೂಪಾಯಿಗಳ ವರೆಗೆ ಹೆಚ್ಚಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಮಾನ್ಯ ರಾಜ್ಯಪಾಲರು ಕೊಳಚೆ ನಿರ್ಮೂಲನದ ಬಗ್ಗೆ ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ. ನಾನು ಕೊಳಚೆ ನಿರ್ಮೂಲನಾ ಮಂಡಲಿಯ ಅಧ್ಯಕ್ಷನಾಗಿ ಎರಡು ವರ್ಷ ಕೆಲಸ ಮಾಡಿದ್ದೇನೆ. ನಾನು ಅಧ್ಯಕ್ಷನಾಗಿದ್ದಾಗ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡತಕ್ಕ ಜನಗಳ ಸಮಸ್ಯೆ ಬಗ್ಗೆ ಅಧ್ಯಯನ ಮಾಡಿದ್ದೇನೆ. ಇದು ಬಹಳ ಬೃಹದಾಕಾರವಾದ ಸಮಸ್ಯೆಯಾಗಿದೆ. ನಾನು ಇದ್ದಾಗ ಬೆಂಗಳೂರು ನಗರದಲ್ಲಿ ೧೬೧ ಕೊಳಚೆ ಪ್ರದೇಶಗಳಿದ್ದವು. ಈಗ ಇನ್ನೂ ಜಾಸ್ತಿಯಾಗಿದೆಯೆಂದು ನನ್ನ ಗಮನಕ್ಕೆ ಬಂದಿದೆ. ಈ ಬೃಹದಾಕಾರವಾದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಈ ಸಂಧರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಕೊಳಚೆ ನಿವಾಸಿಗಳ ಸಮಸ್ಯೆಯ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ಮಾಡಿ ೪೫ ಕೋಟಿ ರೂಪಾಯಿಗಳ ಯೋಜನೆಯನ್ನು ರೂಪಿಸಲಾಗಿತ್ತು. ಇದಕ್ಕೆ ವರ್ಲ್ಡ್ ಬ್ಯಾಂಕಿನವರು ಹಣ ಸಹಾಯ ಮಾಡುವುದಕ್ಕೆ ಮುಂದೆ ಬಂದಿದ್ದರು. ಬಹಳ ಕಷ್ಟಪಟ್ಟು ಈ ಯೋಜನೆ ಮಾಡಲಾಗಿತ್ತು, ಇವತ್ತು ಇದು ಶೀತಲಯಂತ್ರದಲ್ಲಿದೆ. ಸರ್ಕಾರ ಇದರ ಬಗ್ಗೆ ಪರಿಶೀಲನೆಮಾಡಿ ಆದಷ್ಟು ಬೇಗ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಕೈಗಾರಿಕೆ ಕ್ಷೇತ್ರದ ಬಗ್ಗೆ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ದೇಶದಲ್ಲಿ ಕೈಗಾರಿಕಾ ಪ್ರಗತಿ ದಿನೇ ದಿನೇ ಕುಸಿಯುತ್ತಿದೆ, ನಮ್ಮ ಸರ್ಕಾರದವರು ಸಣ್ಣ ಮತ್ತು ಗೃಹ ಕೈಗಾರಿಕೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸ್ಥಾಪನೆ ಮಾಡುವುದಕ್ಕೆ ಗಮನ ಕೊಡಬೇಕು, ಹಳೆಯ ಕೈಗಾರಿಕೆಗಳ ಜೀರ್ಣೋದ್ಧಾರದ ಬಗ್ಗೆಯೂ ಹೆಚ್ಚಿನ ಗಮನ ಕೊಡಬೇಕು. ರೋಗಗ್ರಸ್ತ ಕೈಗಾರಿಕೆಗಳ ಬಗ್ಗೆ ಶಾಸಕರ ಒಂದು ಅಧ್ಯಯನ ತಂಡವನ್ನು ರಚಿಸಿ ಸೂಕ್ತ ವರದಿಯನ್ನು ತರಿಸಿಕೊಳ್ಳಬೇಕೆಂದು ಹೇಳುತ್ತೇನೆ. ರಾಜ್ಯದಲ್ಲಿ ಎಷ್ಟು ಕೈಗಾರಿಕೆಗಳು ತೊಂದರೆಗೆ ಗುರಿಯಾಗಿವೆ, ನಿರುದ್ಯೋಗ ಸಮಸ್ಯೆ ಕೂಡ ಇದರಿಂದ ಬೆಳೆಯುತ್ತಿದೆ. ಇವೆಲ್ಲವುಗಳ ಬಗ್ಗೆಯೂ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಯಾವುದೇ ಕೈಗಾರಿಕೆಗಳು ಪ್ರಗತಿದಾಯಕವಾಗಿ ಬೆಳೆಯಬೇಕಾದರೆ, ವಿದ್ಯುತ್ ಉತ್ಪಾದನೆ ಅತಿ ಮುಖ್ಯ ವಿದ್ಯುತ್ ಕೊರತೆಯನ್ನು ಹೋಗಲಾಡಿಸಲು ರಾಯಚೂರಿನಲ್ಲಿ ನಮ್ಮ ಸರ್ಕಾರದವರು ಒಂದು ಥರ್ಮಲ್ ಪ್ಲಾಂಟ್‌ನ್ನು ಸ್ಥಾಪನೆ ಮಾಡಿದ್ದಾರೆ. ನನ್ನ ಕ್ಷೇತ್ರವಾದ ಭದ್ರಾವತಿಯಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳು ವಿದ್ಯುತ್ ತೊಂದರೆಯನ್ನು ಅನುಭವಿಸುತ್ತಿದ್ದು ಬಹಳ ತೊಂದರೆಯಲ್ಲಿ ನಡೆಯುತ್ತಿವೆ. ನಿರುದ್ಯೋಗ ಸಮಸ್ಯೆ ಕೂಡ ಉಂಟಾಗಿದೆ. ಭದ್ರಾವತಿಯಲ್ಲಿಯೂ ಕೂಡ ಒಂದು ಥರ್ಮಲ್ ಪ್ಲಾಂಟ್ ಸ್ಥಾಪನೆ ಮಾಡಿ ಕೈಗಾರಿಕೆಗಳ ಬೆಳವಣಿಗೆಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ರಾಜ್ಯ ಸರ್ಕಾರ ಹಣಕಾಸಿನ ತೊಂದರೆ ಬಗ್ಗೆ ಹೇಳಬಹುದು. ಕೇಂದ್ರ ಮತ್ತು ರಾಜ್ಯ

ಸರ್ಕಾರಗಳು, ಕಾರ್ಖಾನೆಗಳವರು ಸೇರಿ ಥರ್ಮಲ್ ಪ್ಲಾಂಟ್ ಸ್ಥಾಪನೆ ಮಾಡುವ ವಿಚಾರದಲ್ಲಿ ಹಣ ಕೂಡಿಸಿ ಪ್ರಗತಿದಾಯಕವಾಗಿ ಕೈಗಾರಿಕೆಗಳು ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ.

ಕೃಷ್ಣಾ ಮೇಲ್ದಂಡೆ ಯೋಜನೆಗೆ ವರ್ಲ್ಡ್ ಬ್ಯಾಂಕ್ ಕೂಡ ಧನ ಸಹಾಯ ನೀಡಿದೆ. ಈ ಯೋಜನೆಯ ಕಾರ್ಯವನ್ನು ಆದಷ್ಟು ತೀವ್ರಗತಿಯಿಂದ ಕಾರ್ಯಗತಗೊಳಿಸಬೇಕೆಂದು ಹೇಳುತ್ತೇನೆ. ಈ ಯೋಜನೆ ಹೈದರಾಬಾದ್ ಕರ್ನಾಟಕದ ಜನತೆಗೆ ವರಪ್ರಸಾದವಾಗಲಿದೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ವ್ಯಾಪ್ತಿಯಲ್ಲಿ ಅಧಿಕಾರಗಳನ್ನು ಪ್ರಾರಂಭ ಮಾಡುವ ಸರ್ಕಾರದ ಘೋಷಣೆಯನ್ನು ಆದಷ್ಟು ಬೇಗ ಕಾರ್ಯರೂಪಕ್ಕೆ ತರಬೇಕೆಂದು ಹೇಳುತ್ತೇನೆ. ನಮ್ಮ ಭದ್ರಾ ಯೋಜನೆಯ ಅಚ್ಚುಕಟ್ಟು ಕೆಳಗೆ, ನನ್ನ ಕ್ಷೇತ್ರದಲ್ಲಿ ೪೦,೦೦೦ ಎಕರೆ ಅಚ್ಚುಕಟ್ಟು ಇದೆ. ಆ ಭಾಗದ ರೈತರು ವೈಜ್ಞಾನಿಕವಾಗಿ ಬೇಸಾಯ ಮಾಡುವ ವಿಧಾನವನ್ನು ಅರಿತುಕೊಳ್ಳಬೇಕಾಗಿದೆ. ಯಾವ ಕಾಲಕ್ಕೆ ಏನು ಬೆಳೆ ಬೆಳೆಯಬೇಕು, ಯಾವ ಪ್ರಮಾಣದಲ್ಲಿ ನೀರು ಬಿಡಬೇಕೆಂಬ ಅರಿವು ರೈತರುಗಳಿಗೆ ಇಲ್ಲದೆ ಬಹಳ ತೊಂದರೆ ಪಡುತ್ತಿದ್ದಾರೆ. ಪ್ರಾಧಿಕಾರಗಳನ್ನು ಚುರುಕುಗೊಳಿಸುವುದರ ಮೂಲಕ ರೈತರುಗಳಿಗೆ ಹೆಚ್ಚಿನ ತಿಳುವಳಿಕೆ ಜ್ಞಾನವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೇಜರ್ ಪ್ರಾಜೆಕ್ಟುಗಳಲ್ಲಿ ವಾಟರ್ ರೇಟ್ ವಸೂಲಿ ಮಾಡುತ್ತಾರೆ. ಇನ್ನಿತರೆ ಸೆಸ್ ಗಳನ್ನು ಇದು ವರೆಗೆ ಐ.ಟಿ.ವಸೂಲಿ ಮಾಡಲಾಗುತ್ತದೆ.ಆದರೆ ರೋಡ್ ಮೈಯಿನ್‌ಟೈನ್ ಮಾಡಿಲ್ಲ. ಪ್ರಸ್ತುತ ಸರ್ಕಾರ ರೈತರಸಮಸ್ಯೆಗಳ ಬಗ್ಗೆ ತೀವ್ರವಾದ ಕಳಕಳಿಯನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.ಕಳೆದ ೧೦-೧೨ ವರ್ಷಗಳಿಂದ ನಿಶ್ಚಿತ ಮಳೆ ಬಾರದೆ ಅಭಾವ ತಲೆದೋರಿದ್ದು ಸಣ್ಣ ಹಿಡುವಳಿದಾರರ ಗೋಳು ಜಾಸ್ತಿಯಾಗಿದೆ. ಸರ್ಕಾರ ಭೂಮಿಯ ಒಳಗಡೆ ಇರತಕ್ಕ ನೀರನ್ನು ತೆಗೆದು ಸಣ್ಣ ಹಿಡುವಳಿದಾರರಿಗೆ ನೀರಿನ ಸೌಕರ್ಯ ಒದಗಿಸುವ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ಮಾಡಿ ಈ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ.

೩-೩೦ ಪಿ. ಎಂ.

ಅಧ್ಯಕ್ಷರೇ,ಇನ್ನು ರೈಲ್ವೆ ಲೈನ್ ವಿಚಾರದಲ್ಲಿ ರಾಜ್ಯ ಸರ್ಕಾರದವರು ತೆಗೆದುಕೊಂಡ ನಿಲುವು ಸ್ತುತ್ಯಾ-ರ್ಹವಾದುದು. ಬೆಂಗಳೂರು-ಗುಂತಕಲ್ ಮಾರ್ಗ, ಬೆಂಗಳೂರು-ಮೈಸೂರು ಮಾರ್ಗ. ಬೆಂಗಳೂರು-ಮೀರಜ್ ಮಾರ್ಗ, ಹಾಗೇ ಮಲೆನಾಡು ಪ್ರದೇಶದಲ್ಲಿ ತಾಳಗುಪ್ಪದಿಂದ ಕಾರವಾರ ರೈಲು ಮಾರ್ಗ ತೆಗೆದುಕೊಳ್ಳುವುದರಿಂದ ಮಲೆನಾಡು ಪ್ರದೇಶದ ಜನರಿಗೆ ಹೆಚ್ಚಿನ ಸೌಲಭ್ಯವಾಗುತ್ತದೆಂದು ಹೇಳಬಯ ಸುತ್ತೇನೆ. ಇನ್ನು ವಿಜಯನಗರದ ಉಕ್ಕಿನ ಕಾರ್ಖಾನೆ ಬಗ್ಗೆ ತೀವ್ರ ರೀತಿಯಿಂದ ನಿಲುವು ತೆಗೆದು ಕೊಳ್ಳಬೇಕು. ಕರ್ನಾಟಕದ ಪಾರ್ಲಿಮೆಂಟ್ ಸದಸ್ಯರು ಏನು ಇದ್ದಾರೆ ಅವರಲ್ಲಿ ಕೆಲವರನ್ನು ತೆಗೆದು ಕೊಂಡು ಒಂದು ಟೀಮು ಮಾಡಿ ಅವರು ಪ್ರಧಾನ ಮಂತ್ರಿಗಳ ಹತ್ತಿರ ಡೆಲಿಗೇಷನ್ ಹೋಗಿ ಈ ಕಾರ್ಖಾ ನೆಯನ್ನು ಆದಷ್ಟು ಬೇಗ ತೆರೆಯಲಿಕ್ಕೆ ಒತ್ತಾಯ ತರಬೇಕೆಂದು ಹೇಳುತ್ತೇನೆ. ಸಮಾಜದಲ್ಲಿ ಬಡತನದ ರೇಖೆಗಿಂತಲ ೩ ಕೆಳಗಿನವರಿಗೆ ಸಮರ್ಪಕವಾಗಿ ಕೆಲಸವನ್ನು ಒದಗಿಸಬೇಕಾದರೆ ನಮ್ಮ ಪಕ್ಷದ ಪ್ರಣಾಳಿಕೆ ಯಲ್ಲಿರತಕ್ಕ ಇಪ್ಪತ್ತು ಅಂಶದ ಕಾರ್ಯಕ್ರಮವನ್ನು ತೀವ್ರ ರೀತಿಯಲ್ಲಿ ಜಾರಿಗೆ ತರಬೇಕು. ಇದರ ಬಗ್ಗೆ ತಾಲ್ಲೂಕು ಮಟ್ಟದಲ್ಲಿ ಇಂಪ್ಲಿಮೆಂಟೇಷನ್ ಕಮಿಟಿ ಮಾಡಬೇಕಾದ್ದು ನಿಧಾನವಾಗಿದೆ. ಆದನ್ನು ಆದಷ್ಟು ಬೇಗ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರು ಕಾಲಾವಕಾಶ ಕಡಿಮೆ ಕೊಟ್ಟಿರುವುದರಿಂದ ನನ್ನ ಭಾಷಣವನ್ನು ಮುಗಿಸಬೇಕಾಗಿದೆ. ಆದುದರಿಂದ ಕೊನೆಯದಾಗಿ ಒಂದು ಮಾತು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸುವ ಬಗ್ಗೆ, ಮಹಾಜನ್ ವರದಿ ಯನ್ನು ಜಾರಿಗೆ ತರುವ ಬಗ್ಗೆ, ಮಣ್ಣಿನ ಮಕ್ಕಳಿಗೆ ಉದ್ಯೋಗ ಒದಗಿಸುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಲು ನಮ್ಮ ಪ್ರೋತ್ಸಾಹ ಇದೆ ಎಂದು ಹೇಳಿ, ಇಷ್ಟುಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತು ಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಡಿ. ಚೌಡಯ್ಯ (ಕೆರಗೋಡು).—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಬಗ್ಗೆ ಕಳೆದ ಎರಡು ದಿವಸಗಳಿಂದಲೂ ಚರ್ಚೆ ನಡೆಯುತ್ತಿದೆ. ಈ ಒಂದು ಚರ್ಚೆಯಲ್ಲಿ ಭಾಗವಹಿಸುವು ದಕ್ಕೆ ಅವಕಾಶ ಮಾಡಿಕೊಟ್ಟಂತಹ ಅಧ್ಯಕ್ಷರಿಗೆ ಮೊದಲನೆಯದಾಗಿ ವಂದಿಸುತ್ತೇನೆ. ಈಗ ನಮ್ಮ ಮುಂದಿರತಕ್ಕ ರಾಜ್ಯಪಾಲರ ಭಾಷಣಕ್ಕೂ ಕಳೆದ ಎರಡು ವರ್ಷಗಳ ರಾಜ್ಯಪಾಲರ ಭಾಷಣಕ್ಕೂ

ಹೋಲಿಕೆ ಮಾಡಿದರೆ ನನಗನ್ನಿಸುತ್ತದೆ, ನಮ್ಮ ಹಳ್ಳಿಯಲ್ಲಿ ಒಂದು ಮಾತು ಹೇಳುತ್ತಾರೆ. ಅದು ಏನ್ ಅಂದರೆ, ಬಹಳ ಆತುರ ಆತುರವಾಗ ಸಂತೆಗೆ ಮೂರು ಮೊಳ ನೇದ ಹಾಗೆ ಅಂತ. ಹಾಗೆ ಆತುರಾತುರ ವಾಗಿ ಮಂತ್ರಿಮಂಡಲದವರು ರಾಜ್ಯಪಾಲರ ಬಾಯಲ್ಲಿ ಈ ಭಾಷಣವನ್ನು ಹೇಳಿಸಿದ್ದಾರೆ. ಕೇವಲ ಐದಾರು ಪುಟಗಳಲ್ಲಿ ಇರತಕ್ಕ ಭಾಷಣವನ್ನು ನೋಡಿದರೆ ಬಹುಶಃ ಸರ್ಕಾರದಲ್ಲಿ ಒಟ್ಟು ಎಷ್ಟು ಇಲಾಖೆ ಗಳಿವೆ ಆ ಇಲಾಖೆಗಳಲ್ಲಿ ಕಾಲು ಭಾಗದಷ್ಟು ಇಲಾಖೆಗಳ ಒಂದು ಪ್ರಗತಿಯನ್ನು ಮಾತ್ರ ಹೇಳಿದ್ದಾರೆ. ಇನ್ನು ಮುಕ್ಕಾಲು ಭಾಗದಷ್ಟು ಇಲಾಖೆಗಳ ವಿಚಾರವನ್ನು ಬಿಟ್ಟುಬಿಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಪ್ರಾಮುಖ್ಯವಾದ ವಿಚಾರ ಅಂದರೆ, ವ್ಯವಸಾಯದ ವಿಚಾರ. ಈ ವ್ಯವಸಾಯದ ವಿಚಾರದಲ್ಲಿ ಇವರು ಏನೇನೂ ಪ್ರಸ್ತಾಪ ಮಾಡಿಲ್ಲ. ಸಹಕಾರ ಇಲಾಖೆಯ ವಿಷಯದಲ್ಲಿ ಪ್ರಸ್ತಾಪ ಮಾಡಿಲ್ಲ, ಸಿರಿಕಲ್‌ಚರ್ ಇಲಾಖೆಯ ವಿಷಯದಲ್ಲಿ ಪ್ರಸ್ತಾಪ ಮಾಡಿಲ್ಲ. ಹಾರ್ಟಿಕಲ್ಚರ್ ಇಲಾಖೆಯ ವಿಷಯದಲ್ಲಿ ಪ್ರಸ್ತಾಪ ಮಾಡಿಲ್ಲ. ಹೀಗೆ ಅನೇಕ ಮುಖ್ಯವಾದಂಥ ಇಲಾಖೆಗಳ ವಿಷಯದಲ್ಲಿ ಏನೇನೂ ಪ್ರಸ್ತಾಪ ಮಾಡದೇ ಇರತಕ್ಕದ್ದನ್ನು ನೋಡಿದರೆ ಈ ರಾಜ್ಯಪಾಲರ ಭಾಷಣ ಅಪೂರ್ಣವಾಗಿದೆ ಎಂದು ವಿಷಾದದಿಂದ ಹೇಳ ಬೇಕಾಗುತ್ತದೆ. ಅಧ್ಯಕ್ಷರೆ, ಪ್ರಥಮವಾಗಿ ರಾಜ್ಯಪಾಲರ ಬಾಯಲ್ಲಿ ಏನು ಹೇಳಿಸಿದ್ದಾರೆ ಅಂದರೆ, ಏನು ಜೀವನಾವಶ್ಯಕ ವಸ್ತುಗಳು ಇವೆಯೋ ಅವುಗಳ ಪೂರೈಕೆ ಹಾಗೂ ವಿತರಣೆ ಮತ್ತು ಬೆಲೆ ಸ್ಥಿರೀಕರಣ, ಈ ವಿಷಯಗಳಲ್ಲಿ ನಮ್ಮ ಸರ್ಕಾರ ಹೆಚ್ಚಿನ ಒಂದು ಆದ್ಯತೆಯನ್ನು ಕೊಟ್ಟಿದೆ, ಕೊಡುತ್ತಿದ್ದೇವೆ ಅಂತ ಹೇಳಿಸಿದ್ದಾರೆ. ಕಳೆದ ಒಂದೂವರೆ ತಿಂಗಳಿನಿಂದ ಈಚೆಗೆ ಜೀವನಾವಶ್ಯಕ ವಸ್ತುಗಳ ಪೂರೈಕೆಯಾಗಲಿ, ಬೆಲೆ ಸ್ಥಿರತೆಯನ್ನಾಗಲಿ ನೋಡಿದರೆ ಸರ್ಕಾರ ಇದರಲ್ಲಿ ಪೂರ್ಣ ವಿಫಲವಾಗಿದೆ ಅನ್ನತಕ್ಕ ವಿಚಾರವನ್ನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಇನ್ನು ಮುಂದೆ ಸಾಗುವುದಾದರೆ, ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಕುಡಿಯುವ ನೀರನ್ನು ಪೂರೈಕೆ ಮಾಡುವ ವಿಚಾರದಲ್ಲಿ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಬಹುಶ: ನಮ್ಮ ರಾಜ್ಯದ ಅನೇಕ ಸಣ್ಣಪುಟ್ಟ ಹಳ್ಳಿಗಲ್ಲಿ ಮತ್ತು ದೊಡ್ಡ ಗ್ರಾಮಗಳಲ್ಲಿ ಎಷ್ಟೋ ಕಡೆ ಕುಡಿಯುವ ನೀರಿನ ವ್ಯವಸ್ಥೆ ಮಾಡದೇ ಇರತಕ್ಕದ್ದು ಇದೆ ಇನ್ನು ಬೋರ್‌ವೆಲ್ ಹಾಕಿಸಿರತಕ್ಕದ್ದರ ಬಗ್ಗೆ ಕಳೆದ ಎರಡು ವರ್ಷಗಳಿಂದಲೂ ನಾವು ಈ ಸದನದಲ್ಲಿ ಅನೇಕ ಸಾರಿ ಪ್ರಸ್ತಾಪ ಮಾಡಿದ್ದೇವೆ. ಈ ಬೋರ್‌ವೆಲ್ ಹಾಕತಕ್ಕ ಪ್ರವೃತ್ತಿ ಹೇಗಿದೆಯೆಂದರೆ, ಬೋರ್‌ವೆಲ್ ಏನಾದರೂ ಕೆಟ್ಟು ಹೋದರೆ ಅದನ್ನು ತಿಂಗಳು ಗಟ್ಟಲೆ ಆದರೂ ಕೂಡ ರಿಪೇರಿ ಮಾಡುವುದಿಲ್ಲ. ಇದರ ಬಗ್ಗೆ ನಾಲ್ಕಾರು ಸಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ ರಿಪೇರಿ ಮಾಡಿಸುವ ಇಷ್ಟ ಅವರಿಗೆ ಇರುವುದಿಲ್ಲ. ಇನ್ನು ಕೆಲವು ಕಡೆ ಏನಾಗಿದೆ ಅಂದರೆ, ಬೋರ್‌ವೆಲ್‌ಗಳನ್ನು ತೆಗೆದಿದ್ದಾರೆ. ಆದರೆ ನೀರು ಎತ್ತುವ ಪಂಪನ್ನು ಸುಮಾರು ನಾಲ್ಕೈದು ತಿಂಗಳಾದರೂ ಹಾಕದೇ ಇರುವಂತಹ ನಿದರ್ಶನಗಳು ಒಂದೊಂದು ತಾಲ್ಲೂಕಿನಲ್ಲಿ ಸುಮಾರು ೪೦ ರಿಂದ ೫೦ರ ವರೆಗೆ ಇದೆ. ಇನ್ನು ನಗರದ ನೀರು ಪೂರೈಕೆ ವಿಚಾರದಲ್ಲಿ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬೋರ್ಡ್‌ನವರಿಗೆ ೮-೧೦ ನಗರಗಳನ್ನು ಸೇರ್ಪಡೆ ಮಾಡಿದ್ದೇವೆ, ಅದರ ವ್ಯವಸ್ಥೆ ಯನ್ನು ಅವರು ನೋಡುತ್ತಾರೆಂದು ಹೇಳಿದ್ದಾರೆ. ಮಂಡ್ಯ ನಗರದ ವಿಚಾರ ಹೇಳಬೇಕು ಅಂದರೆ, ಶ್ರೀರಂಗಪಟ್ಟಣದಿಂದ ಬರತಕ್ಕ ಕಾವೇರಿ ನದಿ ನೀರನ್ನು ಮಂಡ್ಯ ನಗರಕ್ಕೆ ಪೂರೈಕೆ ಮಾಡಬೇಕೆಂದು ಹೇಳಿ ಯೋಜನೆಯನ್ನು ಪ್ರಾರಂಭ ಮಾಡಿ ಸುಮಾರು ಏಳೆಂಟು ವರ್ಷಗಳು ಆದುವು. ಆದರೆ ಇನ್ನೂ ಕಾಲು ಭಾಗ ಕೆಲಸ ಕೂಡ ಮುಗಿದಿಲ್ಲ. ಈ ವಿಷಯದಲ್ಲಿ ಸರ್ಕಾರ ಹೆಚ್ಚಿನ ಗಮನಹರಿಸಿ ಜಾಗ್ರತೆ ನೀರು ಪೂರೈಕೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಜನತಾ ಹೌಸಿಂಗ್ ಸ್ಕೀಮ್ ಏನಿದೆ ಈ ವಿಷಯದಲ್ಲಿ ಈ ಸರ್ಕಾರ ತನ್ನ ಧೋರಣೆಯನ್ನು ಮುಂದುವರಿಸುತ್ತದೆಂದು ರಾಜ್ಯಪಾಲರು ಹೇಳಿದ್ದಾರೆ. ಈಗ ಅನೇಕ ಕಡೆ ಹಳ್ಳಿಗಳಲ್ಲಿ ಜನತಾ ಹೌಸಿಂಗ್ ಸ್ಕೀಮ್‌ನಲ್ಲಿ ಏನು ಮನೆಗಳನ್ನು ಕಟ್ಟಿಸುತ್ತಿ ದ್ದಾರೆ ಆ ಮನೆಗಳು ಬಹುಶ: ಒಂದು ವರ್ಷ ಅಥವಾ ಎರಡು ವರ್ಷ ಆದನಂತರ ಬಿದ್ದು ಹೋಗತಕ್ಕ ದ್ದನ್ನು ನಾವು ನೋಡುತ್ತಿದ್ದೇವೆ. ಇನ್ನು ಸಂಖ್ಯೆಯಲ್ಲಿ ನೋಡಿದರೆ ನಮ್ಮ ರಾಜ್ಯದ ಹಳ್ಳಿಗಳಲ್ಲಿ ಜನಸಂಖ್ಯೆ ಏನು ಇದೆ ಅದಕ್ಕನುಗುಣವಾದ ಸಂಖ್ಯೆಯಲ್ಲಿ ಜನತಾ ಹೌಸಿಂಗ್ ಸ್ಕೀಮ್‌ನಲ್ಲಿ ಮನೆಗಳನ್ನು ಕಟ್ಟಿಸಲಿಕ್ಕೆ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಈಗ ಏನು ಖರ್ಚು ಮಾಡುತ್ತಿದ್ದಾರೆ ಅದರ ಎರಡರಷ್ಟು ಖರ್ಚು ಮಾಡಿದರೆ ಇನ್ನು ಹತ್ತಾರು ವರ್ಷಗಳಲ್ಲಿ ಮನೆಗಳನ್ನು ಕಟ್ಟಿಸುವ ಕೆಲಸದಲ್ಲಿ ಪೂರ್ಣ ಸಾಧನೆ ಮಾಡಲಿಕ್ಕೆ ಆಗದೇ ಇದ್ದರೂ ಮುಕ್ಕಾಲು ಭಾಗ ಸಾಧನೆ ಮಾಡಲಿಕ್ಕೆ ಸಾಧ್ಯ ಆಗುತ್ತದೆ. ಈ ಸ್ಕೀಮ್ ನಲ್ಲಿ ಏನು ಗರೀಬಿ ಲೇ ಔಟ್ ಇದೆ ಅಂತಹ ಕಡೆ ೧೦-೨೦ ಮನೆಗಳನ್ನು ಗುಂಪಿನಲ್ಲಿ ಕಟ್ಟತಕ್ಕದ್ದು ಇದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಇನ್ನು ಎರಡು ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಹೆಚ್. ಡಿ. ಚೌಡಯ್ಯ.—ಮಾನ್ಯ ಅಧ್ಯಕ್ಷರೆ, ನಾನು ವಿರೋಧ ಪಕ್ಷದ ಸದಸ್ಯ, ನನಗೆ ಮಾತನಾಡುವುದಕ್ಕೆ ಸ್ವಲ್ಪ ಹೆಚ್ಚು ಅವಕಾಶ ಕೊಡಬೇಕು. ನಾನು ಭಾಷಣ ಪ್ರಾರಂಭ ಮಾಡಿ ಸ್ವಲ್ಪ ಸಮಯವಾಗಿದೆ. ಅಧ್ಯಕ್ಷರೆ, ಹಳ್ಳಿಗಳಲ್ಲಿ ಹಳೇ ಗ್ರಾಮಠಾಣಗಳು ಏನು ಇವೆ ಅಲ್ಲಿ ಮನೆಕಟ್ಟುವ ವ್ಯವಸ್ಥೆ ಮಾಡಬೇಕು ಹಿಂದೆ ಎಕ್ಸ್‌ಪರಿಮೆಂಟಲ್ ಸ್ಕೀಮ್‌ನಲ್ಲಿ ಮನೆಕಟ್ಟುವ ವ್ಯವಸ್ಥೆ ಇತ್ತು. ಆ ಒಂದು ಯೋಜನೆ ಇವೊತ್ತಿನ ದಿವಸ ಮುಂದುವರಿಯುತ್ತಿಲ್ಲ. ಜನತಾ ಸ್ಕೀಮಿನಲ್ಲಿ ಯಾರು ಯಾರಿಗೆ ಹಳೇ ಗ್ರಾಮಠಾಣಗಳಲ್ಲಿ ಸೈಟುಗಳಿವೆ ಅಲ್ಲಿ ಮನೆ ಕಟ್ಟಲಿಕ್ಕೆ ಅವರಿಗೆ ಅವಕಾಶ ಕಲ್ಪಿಸಿಕೊಡಬೇಕೆಂದು ನಾನು ಸಲಹೆ ಕೊಡುತ್ತೇನೆ.

SRI A. LAKSHMI SAGAR.—Sir, the other members of the Council of Ministers are here including Cabinet Ministers, let us presume. Who is going to reply to the debate ? The Hon. Chief Minister has not been present when the debate started. He has come only today. On the first day, Sri Y. Ramakrishna was present. Of course, now, Sri Moily is coming.

MR. SPEAKER.—Don't worry. He has come.

SRI A. LAKSHMISAGAR.—To whom are we addressing ? You are here and formally, we are addressing you. The other Ministers who were present here in the absence of Sri Moily did not give me an impression that they were keenly hearing the Hon. Members. I am a teacher by profession. I know how students behave. I can make out what they were doing. I have been seeing them quite a long time and they did not give me an impression of hearing the Hon. Members. Now, Sri Moily is here and there is no complaint.

ಶ್ರೀ ಬಿ. ರಾಮಯ್ಯ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡತಕ್ಕ ವಿಚಾರಗಳನ್ನೆಲ್ಲಾ ನಾವು ಗುರುತು ಹಾಕಿಕೊಳ್ಳುತ್ತಿದ್ದೇವೆ.

ಶ್ರೀ ಎಚ್. ಡಿ. ಚೌಡಯ್ಯ.—ಮಾನ್ಯ ಅಧ್ಯಕ್ಷರೆ, ರಸ್ತೆ ಸಾರಿಗೆ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಇದೊಂದು ದಾರುಣ ಕಥೆ. ಹೊಸದಾಗಿ ರಸ್ತೆ ಸಾರಿಗೆ ಸಚಿವರಾಗಿರತಕ್ಕ ಮಾನ್ಯ ಸದ್ಯೋಜಾತಪ್ಪನವರು ಬಳ್ಳಾರಿಯಿಂದ ಬಂದಿರತಕ್ಕವರು, ಅವರು ರಸ್ತೆ ಸಾರಿಗೆ ಬಸ್‌ನಲ್ಲಿ ಕಳೆದ ೨೦-೨೫ ವರ್ಷಗಳಲ್ಲಿ ಸುಮಾರು ಸಾವಿರಾರು ಸಾರಿ ಓಡಾಡಿ ಸಾಕಷ್ಟು ಅನುಭವ ಪಡೆದುಕೊಂಡಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಆದುದರಿಂದ ನಾನು ಹೆಚ್ಚಾಗಿ ಪ್ರಸ್ತಾಪಿಸುವುದಕ್ಕೆ ಹೋಗದೆ ಕೇವಲ ಒಂದೆರಡು ಮಾತುಗಳಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಮಂಡ್ಯ ನಗರದಿಂದ ಕೇವಲ ೬ ಮೈಲಿ ದೂರದಲ್ಲಿ ಒಂದು ಟಿ. ಬಿ. ಆಸ್ಪತ್ರೆ ಇದೆ. ಅಲ್ಲಿಗೆ ರೋಗಿಗಳು ಹೋಗಿಬರುವುದಕ್ಕೆ, ನೌಕರರ ಮಕ್ಕಳು ಶಾಲಾಕಾಲೇಜುಗಳಿಗೆ ಹೋಗಿಬರುವುದಕ್ಕೆ ಬಹಳ ತೊಂದರೆಯಾಗಿದೆಯಾದ್ದರಿಂದ ಅಲ್ಲಿಗೆ ಬಸ್ಸುಗಳನ್ನು ಓಡಿಸಬೇಕೆಂದು, ಮಾನ್ಯ ಮಂತ್ರಿಯವರಿಗೆ ನಾನು ಒಂದು ಮನವಿಯನ್ನು ಸಲ್ಲಿಸಿ ಅರಿಕೆಮಾಡಿಕೊಂಡಿದ್ದೆ. ಆದರೆ ಇವತ್ತಿನವರೆಗೂ ಆ ಕಾರ್ಯವನ್ನು ಮಾಡಿಕೊಟ್ಟಿಲ್ಲ. ಈಗಲಾದರೂ ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಗ್ರಾಮಾಂತರ ವಿದ್ಯುದ್ದೀಕರಣದ ಬಗ್ಗೆ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಏನನ್ನೂ ಹೇಳಿಲ್ಲ. ೧೯೭೩-೭೪ ರಲ್ಲಿ ಪ್ರಾರಂಭವಾದ ಮಿನಿಮಂ ನೀಡ್ಸ್ ಪ್ರೋಗ್ರಾಂ ಈಗ ಮುಗಿಯುತ್ತಾ ಬಂದಿದೆ. ಸಾವಿರಾರು ಗ್ರಾಮಗಳಿಗೆ ವಿದ್ಯುತ್‌ನ್ನು ಇನ್ನೂ ಒದಗಿಸಬೇಕಾಗಿರುವುದರಿಂದ ಸರ್ಕಾರದವರು ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ದೊಡ್ಡ ನೀರಾವರಿ ವಿಚಾರದಲ್ಲಿ ಒಂದು ಮಾತು ಹೇಳುವುದಾದರೆ, ಹೇಮಾವತಿ ವಿಷಯವನ್ನು ಮಾನ್ಯ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ

ಹೇಮಾವತಿ ಕೆಲಸ ಬಹಳ ಭರದಿಂದ ಸಾಗುತ್ತಿದೆ, ಆದರೆ ಅದಕ್ಕೆ ಹಣದ ಕೊರತೆ ಇದೆ ಎಂದು ಹೇಳಿದ್ದಾರೆ. ಈ ಯೋಜನೆ ಬಹಳ ದೊಡ್ಡದಾದರೂ ಅದಕ್ಕೆ ಖರ್ಚು ಮಾಡುತ್ತಿರುವ ಹಣ ನೋಡಿದಾಗ ಬಹಳ ವಿಷಾದವೆನಿಸುತ್ತದೆ. ಹೇಮಾವತಿ ಎಡದಂಡೆ ನಾಲೆಯನ್ನು ತ್ವರಿತವಾಗಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ, ಆದರೆ ಅದಕ್ಕೆ ಹಣ ಇಲ್ಲ. ಇದಕ್ಕಾಗಿ ಸುಮಾರು ೮–೧೦ ಕೋಟಿ ರೂಪಾಯಿಗಳನ್ನು ಏನು ಸಾಲಮಾಡಿ ಕೊಡುತ್ತಿದ್ದಾರೆ. ಇದು ಏನೇನೂ ಸಾಲದಾಗಿರುವುದರಿಂದ ಕನಿಷ್ಟ ೨೦ ಕೋಟಿ ರೂಪಾಯಿಗಳಿಗೆ ಹೆಚ್ಚಿಸಿದರೆ ಬಹಳ ಅನುಕೂಲವಾಗುತ್ತದೆ. ಇನ್ನು ವಿಶ್ವೇಶ್ವರಯ್ಯ ನಾಲೆಯ ಬಗ್ಗೆ ಎಷ್ಟು ಗಲಾಟೆಯಾಗಿದೆ ಎಂಬುದು ಎಲ್ಲಾ ಮಾನ್ಯ ಸದಸ್ಯರಿಗೂ ಗೊತ್ತಿದೆ. ಆಗ ನಡೆದ ಪ್ರತಿಭಟನೆಯ ನಂತರ ಸರ್ಕಾರದ ಪತಿಯಿಂದ ಮತ್ತು ಸಾರ್ವಜನಿಕರ ಪತಿಯಿಂದ ಒಂದು ಒಪ್ಪಂದಕ್ಕೆ ಬಂದು ಈ ಎರಡೂ ಕೆಲಸಗಳನ್ನೂ ಒಟ್ಟಿಗೇ ತೆಗೆದುಕೊಳ್ಳಲಾಗುತ್ತದೆಂದು ಅಂದಿನ ಮಾನ್ಯ ಮುಖ್ಯ ಮಂತ್ರಿಯವರಾಗಿದ್ದ ಶ್ರೀಮಾನ್ ದೇವರಾಜ ಅರಸ್‌ರವರು ಅಸ್ತಿಭಾರವನ್ನು ಹಾಕಿದರು. ಆದರೆ ಈ ಕೆಲಸಗಳು ಬಹಳ ಮಂದಗತಿಯಲ್ಲಿ ಸಾಗುತ್ತಿವೆ. ಆದ್ದರಿಂದ ಇದನ್ನು ಚುರುಕುಗೊಳಿಸಬೇಕು.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರಿ ಅಧಿಕಾರಿಗಳಿಗೆ, ಗ್ರಾಮಲೆಕ್ಕಿಗರಿಗೆ, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳಿಗೆ, ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ವಾಸಮಾಡಲು ಸರಿಯಾದ ಮನೆಗಳು ಸಿಕ್ಕದೇ ಇರುವುದರಿಂದ ಅವರು ಅಲ್ಲಿ ಹೋಗಿ ಕೆಲಸ ಮಾಡಲು ಹಿಂಜರಿಯುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸುತ್ತಾ, ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರಿ ನೌಕರರಿಗೆ ವಸತಿ ಸೌಕರ್ಯವನ್ನು ಒದಗಿಸಿಕೊಡಬೇಕೆಂಬ ಮಾತನ್ನು ಏನು ಹೇಳಿದ್ದಾರೆ, ಅದನ್ನು ನಾನು ಸ್ವಾಗತಿಸುತ್ತೇನೆ.

ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾಪ ಮಾಡಬೇಕಾಗಿದ್ದ ವಿಷಯಗಳು ಬಹಳವಾಗಿದ್ದುವು. ಆದರೆ ತಾವು ಪದೇ ಪದೇ ಗಂಟೆ ಬಾರಿಸಿ ನನಗೆ ಆದೇಶ ನೀಡುತ್ತಿರುವುದರಿಂದ ಅದಕ್ಕೆ ಮನ್ನಣೆ ನೀಡಿ, ಈ ರಾಜ್ಯಪಾಲರ ಭಾಷಣ ಬಹಳ ನೀರಸವಾಗಿದೆಯೆಂದು ತಿಳಿಸಿ, ಸರ್ಕಾರದಲ್ಲಿರತಕ್ಕ ಎಲ್ಲ ಇಲಾಖೆಗಳೂ ದಕ್ಷತೆಯಿಂದ, ಚುರುಕಾಗಿ ಕೆಲಸಮಾಡುವಂತೆ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ವಿ. ಪತ್ತಾರ್(ಜಮಖಂಡಿ).—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವ ಈ ಚರ್ಚೆಯಲ್ಲಿ ಬಹುತೇಕ ಅಗತ್ಯ ವಸ್ತುಗಳ ವಿತರಣೆ ಹಾಗೂ ಬೆಲೆ ಏರಿಕೆ ಬಗ್ಗೆ ಈ ಸದನದ ಗಮನವನ್ನು ಸೆಳೆದಿದ್ದೇವೆ. ಸ್ವಾತಂತ್ರ್ಯ ಬಂದ ಕಾಲದಿಂದಲೂ ಬೆಲೆ ಏರಿಕೆಯನ್ನು ನೋಡುತ್ತಿದ್ದೇವೆ. ಬೆಲೆ ಏರಿಕೆ ಬಗ್ಗೆ ಮೇಲಿಂದ ಮೇಲೆ ಈ ಸದನದಲ್ಲಿ ಚರ್ಚೆಗಳಾಗುತ್ತಲೇ ಇವೆ. ತತ್ಪರಿಣಾಮವಾಗಿ ಸಂಘಗಳೂ ಕೂಡ ಆಗುತ್ತಿವೆ. ಸರ್ಕಾರ ನಿರೂಪಿಸಿದ ಯೋಜನೆಗಳಿಗೆ ಹಣವನ್ನು ಕೊಡುತ್ತಿದ್ದೇವೆ. ಮಾತ್ರವಲ್ಲದೆ ಪ್ರತಿವರ್ಷವೂ ಕೊರತೆಯ ಮುಂಗಡ ಪತ್ರಗಳನ್ನು ಮಂಡಿಸುವ ನಿರ್ದೇಶನಗಳನ್ನು ನೋಡುತ್ತಿದ್ದೇವೆ. ಇದು ಒಂದು ಪಕ್ಷದ ಅಥವಾ ಒಬ್ಬ ವ್ಯಕ್ತಿಯ ಸಮಸ್ಯೆ ಅಲ್ಲ. ಇದು ಇಡಿ ರಾಷ್ಟ್ರವ್ಯಾಪಿಯಾದ ಸಮಸ್ಯೆ. ಬೆಲೆ ಏರಿಕೆಯನ್ನು ತಡೆಗಟ್ಟಲು ಈಗಲೇ ಒಂದು ಉಪಾಯವನ್ನು ನಾವು ಕಂಡು ಹಿಡಿಯದೇ ಹೋದರೆ ನಾವು ಮುಂದಿನ ದಿನಗಳಲ್ಲಿ ಅಗತ್ಯವಸ್ತುಗಳ ಅಭಾವವನ್ನು ಎದುರಿಸಬೇಕಾಗುತ್ತದೆಂದು ನಾನು ಈಗಲೇ ಹೇಳಬಯಸುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ಕಳೆದ ವರ್ಷ ಕೇಂದ್ರ ಸರ್ಕಾರ ಸುಮಾರು ೩ ಸಾವಿರ ಕೋಟಿ ರೂಪಾಯಿಗಳ ಒಂದು ಖೋತಾ ಬಡ್ಜೆಟ್‌ನ್ನು ಮಂಡಿಸಿತು. ಇದಕ್ಕಾಗಿ ಹೆಚ್ಚು ಹಣವನ್ನು ಪ್ರಿಂಟ್ ಮಾಡಿ ಚಲಾವಣೆಗೆ ಬಿಡಲಾಯಿತು. ಮಾರುಕಟ್ಟೆಯಲ್ಲಿ ಅಗತ್ಯವಸ್ತುಗಳು ಕಡಿಮೆ ಇದ್ದುದರಿಂದ ಬೆಲೆಗಳು ಜಾಸ್ತಿಯಾದುವು ಇದು ಹೇಗಿದೆ ಎದರೆ. ಕೊರತೆಯ ಮುಂಗಡಪತ್ರವನ್ನು ತುಂಬಲು ತೆರಿಗೆ ಹಾಕುವುದು, ತೆರಿಗೆ ಜಾಸ್ತಿ ಹಾಕುವುದರಿಂದ ಪದಾರ್ಥಗಳ ಬೆಲೆ ಏರುವುದು ಇದೊಂದು ದುಷ್ಟ ವರ್ತುಲ ನಿರ್ಮಾಣವಾಗಿದೆ. ಆದುದರಿಂದ ನಾವು ಈ ಕೊರತೆ ಮುಂಗಡಪತ್ರವನ್ನು ಮಂಡಿಸುವುದನ್ನೇ ತಪ್ಪಿಸಲು ಪ್ರಯತ್ನ ಮಾಡಬೇಕು.

ಇನ್ನು ಎರಡನೆಯದಾಗಿ ಬೆಲೆ ಏರಿಕೆ ಏತಕ್ಕೆ ಆಗುತ್ತದೆಂದು ಆಮೂಲಾಗ್ರವಾಗಿ ವಿಚಾರ ಮಾಡಿ ನೋಡಿದರೆ, ನಮ್ಮ ಆರ್ಥಿಕ ವ್ಯವಸ್ಥೆ ಏನಿದೆ ಅದಕ್ಕೆ ಸಮಾನಾಂತರದಲ್ಲಿ ಕಪ್ಪು ಹಣದ ಅರ್ಥಿಕ ವ್ಯವಸ್ಥೆ ಇದೆ. ಅಂಕಿ ಅಂಶಗಳ ಪ್ರಕಾರ ಹೇಳುವುದಾದರೆ, ನಮ್ಮ ದೇಶದಲ್ಲಿ ಸುಮಾರು ೪ ಸಾವಿರ ಕೋಟಿ

ರೂಪಾಯಿ ಕಪ್ಪು ಹಣ ಇದೆ ಎಂದು ಹೇಳಬಯಸುತ್ತೇನೆ. ಹದಿನೈದು ಸಾವಿರ ಕೋಟಿ ರೂಪಾಯಿ ಹಣದಲ್ಲಿ ೨೫ ಸಾವಿರ ಕೋಟಿ ರೂಪಾಯಿ ಕಪ್ಪು ಹಣ ಈ ದೇಶದ ಇದೆ, ಈಗ ಅತ್ಯಂತ ಕಡಿಮೆ ಎಂದರೆ ನಾಲ್ಕು ಸಾವಿರ ಕೋಟಿ ಕಪ್ಪು ಹಣ ಚಲಾವಣೆಯಲ್ಲಿದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಈ ರೀತಿಯಾಗಿ ಕಾಳಸಂತೆಕೋರರು ಮತ್ತೊಂದು ರೀತಿಯಲ್ಲಿ ಕಳ್ಳ ಸಂಗ್ರಹಣೆದಾರರು ಇಷ್ಟೊಂದು ದೊಡ್ಡ ಪ್ರಮಾಣ ದಲ್ಲಿ ಬೆಳೆಯುತ್ತಿದ್ದಾರೆ ಎನ್ನುವ ಮಾತನ್ನು ಈ ಸಭೆಯಲ್ಲಿ ತಿಳಿಸಬಯಸುತ್ತೇನೆ. ಕೇವಲ ವ್ಯಾಪಾರ ಸ್ಥರನ್ನು ಹಿಡಿದುಹಾಕುವುದರ ಜೊತೆಗೆ ಕಪ್ಪು ಹಣವನ್ನು ತೆಗೆಗುಹಾಕದ ಹೊರತು ದೇಶದಲ್ಲಿ ಬೆಲೆ ಏರಿಕೆಯನ್ನು ತಡೆಗಟ್ಟಲು ಸಾಧ್ಯವಾಗುವುದಿಲ್ಲ ಒಂದು ನೂರು ರೂಪಾಯಿ ನೋಟುಗಳನ್ನು ನೇರ ವಾಗಿ ರದ್ದುಪಡಿಸುವ ಕಾರ್ಯಕ್ರಮ ಸರ್ಕಾರದವರು ಹಾಕಿಕೊಳ್ಳದೇ ಹೋದರೆ ಬಹಳ ಚಿಂತಾಜನಕವಾದ ಪರಿಸ್ಥಿತಿಯನ್ನು ದೇಶವು ಮುಟ್ಟುವುದರಲ್ಲಿ ಯಾವ ಸಂಶಯವೂ ಇಲ್ಲ. ೨೩ ಪರ್ಸೆಂಟ್ ಹೋಲ್‌ಸೇಲ್ ನಲ್ಲಿ ಬೆಲೆ ಏರುತ್ತಿದ್ದರೆ ೩೦ ಪರ್ಸೆಂಟ್ ರೀಟೇಲ್‌ನಲ್ಲಿ ಬೆಲೆ ಏರಿಕೆಯಾಗುತ್ತಿರುವುದರಿಂದ ಸಾಮಾನ್ಯ ಜನರು ಬಹಳ ದುಃಖಮಯವಾದ ಪರಿಸ್ಥಿತಿಯನ್ನು ಎದುರಿಸಬೇಕಾದ ಪ್ರಸಂಗ ಒದಗಿ ಬಂದಿರುತ್ತದೆ. ಆದ್ದರಿಂದ ಈಗ ವಿಚಾರ ಮಾಡತಕ್ಕಂಥ ವಿಷಯವೇನೆಂದರೆ. ನಮ್ಮ ದೇಶದಲ್ಲಿ ಕಪ್ಪು ಹಣವನ್ನು ಹತೋಟಿಗೆ ತರಲು ಕೊರತೆಯ ಬಡ್ಜೆಟ್ಟ ಮಂಡಿಸುವುದನ್ನೂ ಕಡಿಮೆ ಮಾಡಬೇಕು, ಡೆಮಾಕ್ರಟಿಕ ಕಂಟ್ರಿಗಳಲ್ಲಿ ಯಾವತ್ತು ಹಣದುಬ್ಬರ ಇದ್ದೇ ಇರುತ್ತದೆ. ಅಮೇರಿಕಾದಲ್ಲಿ ಡಾಲರ್ ತನ್ನ ಬೆಲೆಯನ್ನು ಕಳೆದುಕೊಳ್ಳುತ್ತಿರುವುದರಿಂದ ಅಲ್ಲಿಯೂ ಕೂಡ ಬೆಲೆ ಏರಿಕೆ ಒಂದೇ ಸಮನೆ ಏರುತ್ತಾ ಇದೆ. ನಾವು ಬಾಯಿ ಮಾತಿನಲ್ಲಿ ಈ ದೇಶದಲ್ಲಿ ಸಮಾಜವಾದವನ್ನು ತರುತ್ತೇವೆ, ಬೆಲೆ ಏರಿಕೆಯನ್ನು ಕಂಟ್ರೋಲ್ ಮಾಡುತ್ತೇವೆಂದು ಹೇಳಿದಾಕ್ಷಣಕ್ಕೆ ಸಮಾಜವಾದನ್ನು ತರುವುದಕ್ಕಾಗುವುದಿಲ್ಲ. ನಮ್ಮ ಕಾನ್‌ಸ್ಟಿಟ್ಯೂಷನ್ ಪ್ರಕಾರ ದೇಶದಲ್ಲಿ ಸಮಗ್ರವಾದ ಸಮಾಜವಾದವನ್ನು ಜಾರಿಗೆ ತಂದರೆ ಮಾತ್ರ ಬೆಲೆ ಏರಿಕೆ ಯನ್ನು ತಡೆಗಟ್ಟಬಹುದೆಂದು ಹೇಳುತ್ತೇನೆ. ಆದ್ದರಿಂದ ಮಾನ್ಯ ಸಚಿವರಲ್ಲಿ ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ. ಸೋಶಿಯಲಿಸ್ಟ ಕಾರ್ಯಕ್ರಮಗಳನ್ನು ಬೆಲೆ ಏರಿಕೆಯನ್ನು ತಡೆಗಟ್ಟುವುದಕ್ಕೆ ಹಾಕಿ ಕೊಳ್ಳಲಿ ಎಂದು ಕೇಳಕೊಳ್ಳುತ್ತೇನೆ. ಏತಕ್ಕೆಂದರೆ ಪ್ರಾಮಾಣಿಕವಾಗಿ ಸಾರ್ವಜನಿಕರಂಗದಲ್ಲಿ ಉತ್ಪಾದನೆಯ ಸಾಮರ್ಥ್ಯ ಹೆಚ್ಚುವಂತೆ ಮಾಡಬೇಕು. ಕೈಗಾರಿಕೆಗಳು ಖಾಸಗಿರಂಗದಲ್ಲಿ ಸಾಮಾನ್ಯ ಜನರಿಗೆ ಗೃಹ ಕೈಗಾರಿಕೆಗಳಿಗೆ ಬೇಕಾದಂಥ ಸಾಮಾನುಗಳನ್ನು ಉತ್ಪನ್ನ ಮಾಡುವಂತೆ ಪ್ರೋತ್ಸಾಹ ನೀಡ ಬೇಕು. ಸಿಮೆಂಟ್, ಸಕ್ಕರೆ ಇಂಥ ಅಗತ್ಯ ವಸ್ತುಗಳನ್ನು ಸಾರ್ವಜನಿಕರಂಗದಲ್ಲಿ ಉತ್ಪಾದನೆ ಮಾಡು ವಂಥ ಅವಕಾಶವನ್ನು ಹೆಚ್ಚಿಗೆ ಕೊಡಬೇಕು. ೧೯೬೯ನೇ ಇಸವಿಯಿಂದಲೂ ಸರ್ಕಾರದವರು ಸಕ್ಕರೆ ಕಾರ್ಖಾನೆಗಳನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳುತ್ತಲೆ ಇದ್ದಾರೆ, ಇನ್ನೂ ರಾಷ್ಟ್ರೀಕರಣ ಮಾಡಿಲ್ಲ. ಹಲವಾರು ಖಾದ್ಯ ವಸ್ತುಗಳಿಗೆ ಸಂಬಂಧಿಸಿದಂತೆ ಕೈಗಾರಿಕೆಗಳನ್ನು ಸಾರ್ವಜನಿಕರಂಗದಲ್ಲಿ ನಡೆಯುವಂಥ ಒಂದು ಕೆಲಸವನ್ನು ಮಾಡಬೇಕು. ಅಲ್ಲಲ್ಲೇ ಖಾಸಗಿ ರಂಗಗಳಿಗೆ ಲೈಸೆನ್ಸ್ ಕೊಟ್ಟಿ ದ್ದಾರೆ. ಬಹುಶಃ ನಮ್ಮ ರಾಜ್ಯದಲ್ಲಿ ಇಂಥ ಪಬ್ಲಿಕ್ ಸೆಕ್ಟಾರ ಹೊಸ ಉದ್ಯೋಗಗಳು ಅಷ್ಟೊಂದು ಮುಂದೆ ಬಂದಿಲ್ಲ. ಹಾಗೆಯೇ ಸಾರ್ವಜನಿಕರಂಗದಲ್ಲಿ ಉತ್ಪನ್ನ ಮಾಡತಕ್ಕಂಥ ವಸ್ತುಗಳನ್ನು ಅಷ್ಟೇ ಯೋಗ್ಯವಾಗಿ ವಿತರಣೆಯನ್ನೂ ಕೂಡ ಮಾಡಬೇಕು.

ಸ್ವಾಮಿ, ಒಂದು ವಿಷಯವನ್ನು ಇಲ್ಲಿ ಹೇಳುತ್ತಾ ಇದ್ದೇನೆ ಅದೇನೆಂದರೆ ಬೆಲೆಗಳ ಏರಿಕೆಯನ್ನು ತಡೆಗಟ್ಟುವುದಕ್ಕೆ ಪ್ರಾಮಾಣಿಕವಾಗಿ ಮಾಡತಕ್ಕಂಥ ಕಾರ್ಯಕ್ರಮವನ್ನು ನಮ್ಮ ಸರ್ಕಾರವಾಗಲಿ ಕೇಂದ್ರ ಸರ್ಕಾರವಾಗಲಿ ಮಾಡಲೇಬೇಕು ಮಾಡದೇ ಗತಿ ಇಲ್ಲ ಇದು ನನ್ನ ಸ್ಪಷ್ಟವಾದ ಅಭಿಪ್ರಾಯ. ಇದನ್ನು ನಾವು ಇಂದಲ್ಲ ನಾಳೆಯಾದರೂ ಮಾಡಲೇಬೇಕಾಗುತ್ತದೆ. ಬೆಲೆ ಏರಿಕೆಯನ್ನು ತಡೆಗಟ್ಟುವುದಕ್ಕೆ ಸರ್ಕಾರಕ್ಕೆ ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರಕ್ಕೂ ಹೇಳುತ್ತಾ ಇದ್ದೇನೆ. ತಮಗೂ ಕೂಡ ಹೇಳುತ್ತಿದ್ದೇನೆ. ಇದು ಅಗತ್ಯವಾಗಿ ಮಾಡಬೇಕಾದ ಕೆಲಸ. ಉತ್ಪನ್ನ ಮಾಡತಕ್ಕಂಥ ರೈತನಿಗೆ ಮಧ್ಯವರ್ತಿಗಳಿಂದ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಉತ್ಪನ್ನ ಮಾಡತಕ್ಕಂಥ ರೈತನಿಗೆ ಎಷ್ಟು ಹಣ ಸಿಕ್ಕಬೇಕೋ ಅಷ್ಟು ಹಣ ಸಿಕ್ಕುತ್ತಾ ಇಲ್ಲ. ರೈತನು ಉತ್ಪಾದನೆ ಮಾಡತಕ್ಕಂಥ ಪೂರ್ಣ ದಾಸ್ತಾನನ್ನು ಕೊಂಡು ಕೊಂಡು ಗ್ರಾಹಕರಿಗೆ ಯೋಗ್ಯ ಬೆಲೆಗೆ ಪೂರೈಕೆ ಮಾಡಬೇಕು. ಹೀಗಾಗದಿರುವುದು ದೇಶದ ಒಂದು ದುರ್ದೈವ ಎಂದು ಹೇಳಬೇಕಾಗಿದೆ. ಆದ್ದರಿಂದ ಒಂದು ಕಂಟ್ರೋಲ್ ಆಫ್ ಡಿಸ್ಟ್ರಿಬ್ಯೂಷನ್ ಅನ್ನು ಸಿಸ್ಟಮ್ಯಾಟಿಕ್ ಆಗಿ ಮಾಡಬೇಕು. ಉತ್ಪನ್ನ ಎಷ್ಟು ಪ್ರಮಾಣದಲ್ಲಿ ಆಗುತ್ತದೆಯೋ ಅಷ್ಟೇ ಪ್ರಮಾಣ ದಲ್ಲಿ ವಿತರಣೆಯನ್ನೂ ಕೂಡ ಮಾಡಬೇಕು. ಈಗ ವಿತರಣೆ ಯಾವ ರೀತಿ ಮಾಡುತ್ತಿದ್ದಾರೆ ಎನ್ನುವು

ವುದರ ಬಗ್ಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಂದು ನಿರ್ದಿಷ್ಟವಾದ ಪ್ರಮಾಣದಲ್ಲಿ ವಿತರಣೆಯ ಸಿಸ್ಟಮ್ ಹಾಕಿಕೊಳ್ಳಬೇಕು. ನೀವು ಈಗ ಸೊಸೈಟಿಗಳ ಮುಖಾಂತರ ವಿತರಣೆ ಮಾಡುತ್ತಿದ್ದೀರಿ. ಅದು ಯಾವ ರೀತಿ ಎಂದರೆ, ನೀವು ಅವರಿಗೆ ಆಹಾರ ಪದಾರ್ಥಗಳನ್ನು ಕೊಟ್ಟು ಅವರ ಮುಖಾಂತರ ವಿತರಣೆ ಮಾಡಿಸುತ್ತಿದ್ದೀರಿ. ಇದು ಒಂದು ನಿರ್ದಿಷ್ಟವಾದ ಒಂದು ನಿಯಮದಿಂದ ವಿತರಣೆಯಾಗಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಸಾಕಷ್ಟು ಸೊಸೈಟಿಗಳಿವೆ. ಅವುಗಳ ಮೂಲಕ ವಿತರಣೆ ಕೆಲಸ ಮಾಡಬೇಕು. ಹಳ್ಳಿಗಳ್ಳಿಗಳಲ್ಲಿ ಸೊಸೈಟಿಗಳಿಗೆ ಪಂಚಾಯತಿಗಳ ಮುಖಾಂತರ ವಿತರಣೆ ಮಾಡತಕ್ಕಂಥ ಕೆಲಸ ಮಾಡಬೇಕು. ಈ ಸೊಸೈಟಿಗಳ ಮುಖಾಂತರ ವಿತರಣೆ ಕಾರ್ಯ ನಡೆಯುತ್ತಿದ್ದರೂ ಕೆಲವೊಂದು ಲೋಪ ದೋಷಗಳ ನಡೆಯುತ್ತಿವೆ. ಸೊಸೈಟಿಯವರಿಗೆ ಕೊಡತಕ್ಕಂಥ ಸಕ್ಕರೆ, ಸಿಮೆಂಟ್ ಮುಂತಾದು ತೆಗೆದುಕೊಂಡು ಹೋಗಿ ಅವರು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿಬಿಡುತ್ತಾರೆ. ಅವರು ಹೀಗೆ ಮಾಡಿದರೂ ಅದು ಅಪರಾಧವಾಗುವಲ್ಲ. ಇದರ ಬಗ್ಗೆ ಹೈಕೋರ್ಟ್‌ನಲ್ಲಿ ತೀರ್ಮಾನವಾಗಿದೆ. ಯಾವುದೇ ಸೊಸೈಟಿ ಹಣ ಕೊಟ್ಟು ಮಾಲುಗಳನ್ನು ತೆಗೆದುಕೊಳ್ಳುವುದರಿಂದ ಅವರಿಗೆ ಅವರ ಮೇಲಿನ ಸ್ವಾಮ್ಯತೆ ಬರುತ್ತದೆ ಎನ್ನುವ ನಿರ್ಣಯ ಇದೆ. ಇದು ಅಪರಾಧವಲ್ಲವೆಂದು ಹೈಕೋರ್ಟ್ ನಿರ್ಣಯ ಮಾಡಿದೆ. ಆದ್ದರಿಂದ ಸೊಸೈಟಗಳು ಇಂಥ ರೀತಿಯ ಭ್ರಷ್ಟಾಚಾರ ಮಾಡಿದರೆ ಅದಕ್ಕೆ ಯಾವ ರೀತಿ ಶಿಕ್ಷೆಯನ್ನು ಮಾಡಬೇಕು ಎನ್ನುವುದಕ್ಕೆ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

೪-೦೦. ಪಿ. ಎಂ.

ಸರ್ಕಾರದವರು ಹಲವಾರು ಅಮೆಂಡ್‌ಮೆಂಟ್‌ಗಳನ್ನು ತರುತ್ತಿದ್ದಾರೆ. Make it an offence if they are not distributing it properly. ಇಷ್ಟು ಹೇಳಿ ಈ ರೀತಿಯ ಬೆಲೆ ಏರಿಕೆಯನ್ನು ತಡೆಗಟ್ಟುವುದು ಪ್ರಮುಖ ಕೆಲಸ ಇದೆ ಎಂದು ತಮ್ಮ ಗಮನಕ್ಕೆ ತಂದು, ಇನ್ನು ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯಗಳು ಇದೆ ಅವನ್ನು ಹೇಳುತ್ತೇನೆ.

ಶ್ರೀ ಡಿ. ಜಯ ದೇವರಾಜ ಅರಸ್.-ಶ್ರೀ ಪತ್ತಾರ್ ಅವರು ಇಷ್ಟು ಹೊತ್ತು ಹೇಳದ ವಿಷಯಗಳು ರಾಜ್ಯಪಾಲರ ಭಾಷಣದಲ್ಲಿ ಎಲ್ಲೂ ಕಾಣಿಸುತ್ತಾ ಇಲ್ಲ. ಇದನ್ನೆಲ್ಲಾ ಯಾರಿಗಾಗಿ, ಯಾರ ಪರವಾಗಿ ಹೇಳುತ್ತಿದ್ದೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ವಿ. ವಿ. ಪತ್ತಾರ್.—ನಾನು ಅವಶ್ಯಕ ವಸ್ತುಗಳ ವಿತರಣೆಯ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಅದು ರಾಜ್ಯಪಾಲರ ಭಾಷಣದ ಮೊದಲನೆಯ ಪ್ಯಾರಾದಲ್ಲಿ ಇದೆ, ನೋಡಿ.

ಈಗ ಕೃಷ್ಣ ಮೇಲ್ದಂಡೆ ಯೋಜನೆ ನಡೆಯುತ್ತಿದೆ. ಈ ವಿಷಯವನ್ನು ನಾನು ಮಾನ್ಯ ಅರ್ಥ ಮಂತ್ರಿಗಳವರಿಗೆ ಕೇಳುತ್ತಿದ್ದೇನೆ. ಈ ಒಂದು ಯೋಜನೆಯಿಂದ ಸಾವಿರಾರು ಎಕರೆಗಳಿಗೆ ನೀರಾವರಿಯಾಗುತ್ತದೆ. ಈ ಯೋಜನೆಯ ಕೆಲಸ ಈಗ ನಡೆಯುತ್ತಿದ್ದು. ಇದರ ಕಾಸ್ಟ್ ೨೦ ಕೋಟಿ ರೂಪಾಯಿಗಳು ಇದ್ದದ್ದು ಈಗ ೪೦ ಕೋಟಿ ರೂಪಾಯಿಗಳಾಗಿದೆ. the cost of construction has increased. ಇದಕ್ಕಾಗಿ ವರ್ಷೇವರ್ಷೇ ಹಣ ಮಂಜೂರು ಆಗುತ್ತಾ ಇರುವುದು ೨೦ ಲಕ್ಷದಿಂದ ೩೦ ಲಕ್ಷದವರೆಗೆ ಮಾತ್ರ. ಹೀಗೇ ಪ್ರತಿವರ್ಷ ಮಂಜೂರು ಮಾಡುತ್ತಾ ಹೋದ, ೪೦ ವರ್ಷ ಆಗುತ್ತದೆ ಆದ್ದರಿಂದ ಇದು ಬೇಗ ೪-೫ ವರ್ಷಗಳಲ್ಲಿಯೇ ಮುಗಿಯುವ ಹಾಗೆ ಮಾಡಬೇಕಾಗಿದೆ. ಇದರಿಂದ ಜಮಖಂಡಿ ಮತ್ತು ಅಥಣಿ ಭಾಗದಲ್ಲಿ ಬರಗಾಲಕ್ಕೆ ಬಿದ್ದಿರುವ ಪ್ರದೇಶಕ್ಕೆ ನೀರಾವರಿಯಾಗಿ ಲಕ್ಷಾಂತರ ಎಕರೆ ಜಮೀನು ಅಭಿವೃದ್ಧಿಯಾಗುತ್ತದೆ. ಈ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಕೇಳಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರು ಈ ಸದನದ ಮುಂದೆ ಸಾಧಾರಣವಾಗಿ ಸರ್ಕಾರದ ನೀತಿ ನಿರೂಪಣೆಗಳನ್ನು ಕುರಿತು ಹಾಗೂ ಕಾರ್ಯಕ್ರಮಗಳನ್ನು ಕುರಿತು ಭಾಷಣ ಮಾಡತಕ್ಕದ್ದು ಪದ್ಧತಿ ಇದೆ. ಅದರೆ ಈ ಸಾಲಿನಲ್ಲಿ ಅವರು ಮಾಡಿರತಕ್ಕ ಈ ಭಾಷಣದ ಸಾರಾಂಶವನ್ನು ನೋಡುವುದಾದರೆ ಅದರಲ್ಲಿ ಯಾವ ರೀತಿಯ ನೀತಿ ನಿರೂಪಣೆಯೂ ಇಲ್ಲ ಅಥವಾ ಮುಂದಿನ ಸಾಲಿನಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡುತ್ತೇವೆ ಎನ್ನುವುದು ಇದರಲ್ಲಿ ವ್ಯಕ್ತವಾಗಿಲ್ಲವೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇವೆ. ಬಹುಶ: ಈ ಸರ್ಕಾರ ಜನವರಿ ೨ನೇ ವಾರದಲ್ಲಿ ಅಂತ್ಯದಲ್ಲಿ ಅಸ್ತಿತ್ವಕ್ಕೆ ಬಂತು. ಏಕೆ ಇಷ್ಟು ಆತುರವಾಗಿ ರಾಜ್ಯಪಾಲರ ಭಾಷಣವನ್ನು ಮಾಡಿಸಿದರೋ

ಗೊತ್ತಾಗಲಿಲ್ಲ. ಜನವರಿ ೨೩ನೇ ತಾರೀಖು ರಾಜ್ಯಪಾಲರಿಂದ ಈಭಾಷಣವನ್ನು ಮಾಡಿಸಿ ಇದನ್ನು ಕಸದ ಬುಟ್ಟಿಗೆ ಹಾಕಿಸಿದರು. ಇವತ್ತು ಮಾರ್ಚಿ ೬ನೇತಾರೀಖು ಚರ್ಚೆಗೆ ತೆಗೆದುಕೊಂಡಿದ್ದಾರೆ. ಬಹುಶಃ ಸರ್ಕಾರ ಇನ್ನೂ ಹೆಚ್ಚಿನ ಕಾಲವನು ತೆಗೆದುಕೊಂಡು, ಸರ್ಕಾರ ತಮ್ಮ ನೀತಿ ನಿರೂಪಣೆ ಬಗ್ಗೆ ಆಲೋಚನೆ ಮಾಡಿ ಅನಂತರ ರಾಜ್ಯಪಾಲರಿಂದ ಓದಿಸಿದ್ದರೆ ಇನ್ನೂ ಹೆಚ್ಚು ಅನುಕೂಲ ಆಗುತ್ತಿತ್ತು ಎಂದು ನನಗಾದರೂ ಅನ್ನಿಸುತ್ತದೆ. ಶ್ರೀಮಾನ್ ಚೌಡಯ್ಯನವರು ಹೇಳಿದಹಾಗೆ, ಆತುರಾತುರವಾಗಿ ಸಂತೆಗೆ ಮೂರು ಮೊಳ ನೇಯ್ದರು. ಎಂಬ ಹಾಗೆ. ಇದನ್ನು ತಯಾರು ಮಾಡಿ ನಮ್ಮ ಮುಂದೆ ಇಟ್ಟಿದ್ದಾರೆ. ಇಲ್ಲಿ ಒಂದು ವಿಷಯವನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ ಏನೆಂದರೆ 'ದೇಶದ ಮಟ್ಟದಲ್ಲಿ ರಾಜಕೀಯ ಬದಲಾವಣೆ ಆಗಿದೆ. ಶ್ರೀಮತಿ ಇಂದಿರಾಗಾಂಧಿಯವರು ಸುಮಾರು ೩೩ ತಿಂಗಳುಗಳಕಾಲ ವನವಾಸವನ್ನು ಮುಗಿಸಿ ಆದಮೇಲೆ ಮತ್ತೆ ಅವರು ಅಧಿಕಾರ ಸೂತ್ರವನ್ನು ವಹಿಸಿದ್ದಾರೆ, ಪರಿಣಾಮವಾಗಿ ಈ ರಾಜ್ಯದಲ್ಲಿ ಕಾಂಗ್ರೆಸ್ (ಐ) ಸರ್ಕಾರ ಬಂದಿದೆ ಎಂದು ಹೇಳಿದ್ದಾರೆ. ಸ್ವಾಮಿ. ನಾನು ಇದರಲ್ಲಿ ಒಂದು ಅಂಶವನ್ನು ಒಪ್ಪಿಕೊಳ್ಳಲು ತಯಾರು ಇದ್ದೇನೆ. ಶ್ರೀಮತಿ ಇಂದಿರಾಗಾಂಧಿಯವರು ಈ ದೇಶದ ಜನತೆಯ, ಮತದಾರರ ಸಂಪೂರ್ಣ ಬೆಂಬಲವನ್ನು ಪಡೆದುಕೊಂಡು ಅಧಿಕಾರಕ್ಕೆ ಬಂದಿದ್ದಾರೆ. ತತ್‌ಪರಿಣಾಮವಾಗಿ ಅವರ ಪಕ್ಷದಲ್ಲಿ ೩೫೪ ಜನ ಲೋಕಸಭೆಗೆ ಅವರ ಪಕ್ಷದಿಂದ ಚುನಾಯಿತರಾಗಿದ್ದಾರೆ. ಅವರು ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಇಲ್ಲಿ ಅಸ್ತಿತ್ವಕ್ಕೆ ಬಂದ ಸರ್ಕಾರ ಯಾವ ಆಧಾರದ ಮೇಲೆ ಬಂದಿದೆ. ಇಂದು ಶ್ರೀಮತಿ ಇಂದಿರಾಗಾಂಧಿಯವರ ಹಿಂದೆ ಇರತಕ್ಕವರು ಎಲ್ಲರೂ ಕೂಡ ಜನತೆಯ ಒಂದು ಆಶೀರ್ವಾದವನ್ನು ಪಡೆದಿದ್ದಾರೆಯೋ ಎನ್ನುವುದು ನನ್ನ ಪ್ರಶ್ನೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ಮೈಸೂರು ನಗರದಲ್ಲಿ ಪ್ರವಾಸಮಾಡುತ್ತಿದ್ದಾಗ ಒಂದು ಬಹಿರಂಗ ಸಭೆಯಲ್ಲಿ ಭಾಷಣ ಮಾಡುವಾಗ ಒಂದು ಸವಾಲನ್ನು ಹಾಕಿದರು. ಇಂದು ಕಾಂಗ್ರೆಸ್ (ಯು) ಪಕ್ಷದಲ್ಲಿ ಯಾರು ಸದಸ್ಯರಿದ್ದಾರೆ ಅವರೆಲ್ಲರೂ ರಾಜೀನಾಮೆ ಕೊಟ್ಟು ಮತ್ತೇ ಅದೇ ಪಕ್ಷದಿಂದ ಆರಿಸಿ ಬರಲಿ ನೋಡೋಣ ಎಂದಿದ್ದಾರೆ. ಇವತ್ತು ನಾನು ಅವರಿಗೆ ಸವಾಲು ಹಾಕುತ್ತೇನೆ. ಅವರ ಪಕ್ಷದಲ್ಲಿ ಯಾರು ೧೫೨ ಜನರು ಇದ್ದಾರೆ, ಅವರೆಲ್ಲರೂ ಇಂದು ರಾಜೀನಾಮೆ ಕೊಟ್ಟು ಮತ್ತೆ ಆ ಪಕ್ಷದಿಂದಲೇ ಗೆದ್ದು ಬಂದು ರಾಜ್ಯ ನಡೆಸಲಿ. Let us go to the poll : the ball is in your court it is not with Congress(U). ಅವರಿಗೆ ಗೆದ್ದೇ ಗೆಲ್ಲುತ್ತೇವೆಂಬನಂಬಿಕೆ ಇದ್ದರೆ, ಮತ್ತೆ ಚುನಾವಣೆಗೆ ನಿಲ್ಲಲಿ. ತಾವು ಬಹಿರಂಗ ಸಭೆಯಲ್ಲಿ ಭಾಷಣ ಮಾಡತಕ್ಕ ಸಮಯದಲ್ಲಿ ಬೇಕಾದರೇ ಗೆದ್ದು ಬರಲಿ. ಎಂದು ಹೇಳುವುದು ಸರಿಯಲ್ಲ. ಚುನಾವಣೆಗೆ ಎಂದೂ ರಾಜಕೀಯ ಪಕ್ಷಗಳು ಹೆದರುವುದಿಲ್ಲ. ಶ್ರೀಮತಿ ಇಂದಿರಾಗಾಂಧಿಯವರು ೧೯೭೭ರಲ್ಲಿ ಬಹುಮತವನ್ನು ಕಳೆದು ಕೊಂಡರು. ಯಾವಾಗಲೂ ಹೀಗೇ ಇರುತ್ತದೆ ಎಂಬ ನಂಬಿಕೆ ನಿಮಗೆ ಬೇಡ. ಜನತೆಯ ಒಂದು ತೀರ್ಮಾನ ಏನಿರುತ್ತದೆಯೋ ಅದನ್ನು ಯಾರೂ ಹೇಳುವುದಕ್ಕೆ ಆಗುವುದಿಲ್ಲ. ಆಗ ೧೯೭೭ರಲ್ಲಿ ಹಾಗೆ ಆಯಿತು, ಈಗ ೧೯೮೦ರಲ್ಲಿ ಹೀಗೆ ಆಯಿತು ಈಗ ಅವರು ಏನು ಒಂದು ಸವಾಲನ್ನು ಹಾಕಿದ್ದಾರೆ,ಅದರ ಪರೀಕ್ಷೆಯನ್ನು ಮಾಡುವುದಾದರೆ ಈಗ ಅವರು ವಿಧಾನಸಭೆಯನ್ನು ವಿಸರ್ಜನೆಮಾಡಲಿ ಚುನಾವಣೆಗೆ ನಿಲ್ಲಲಿ. ಚುನಾವಣೆಯಲ್ಲಿ ಬಹುಮತ ಯಾರಿಗೆ ಬರುತ್ತದೆ ಎಂಬುದು ಗೊತ್ತಾಗುತ್ತದೆ. ಅದಲ್ಲದೆ ಈ ರೀತಿ ಸವಾಲನ್ನು ಹಾಕುವುದು ಸರಿಯಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯಪಾಲರ ಬಾಯಲ್ಲಿ ಇನ್ನೊಂದು ವಿಷಯವನ್ನು ಹೇಳಿಸಿದ್ದಾರೆ The Prices of essential commodities such as sugar and Kerosene ಬಗ್ಗೆ ಹೇಳಿ They are committed to see that the essential commodities are available to the people whether they live in cities, towns or villages. ಏನು ಪ್ರಯತ್ನ ಮಾಡುತ್ತಾರೆ ಎನ್ನುವುದು ಅರ್ಥವಾಗಲಿಲ್ಲ, ಚುನಾವಣೆಗೆ ಮೊದಲು ಈ ಆಗತ್ಯ ವಸ್ತುಗಳ ಬೆಲೆಏನು ಇತ್ತು,ಯಾವ ರೀತಿ ಹೋಗುತಾ ಇತ್ತು,ಚುನಾವಣೆ ಆದಮೇಲೆ ಏನು ಬದಲಾವಣೆಆಗಿದೆ ತಾವು ವಾಸ್ತವವಾಗಿ ಇಂತಹದ್ದನ್ನು ಮರೆ ಮಾಚಬಾರದು. ತಾವು ಅಧಿಕಾರಕ್ಕೆ ಬಂದಮೇಲೆ ಈ ದಿಸೆಯಲ್ಲಿ ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ? ಏನು ಕಾರ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದಿದ್ದೀರಿ ಎಂದು ಹೇಳಿದ್ದೀರಾ ? ಇವತ್ತು ಅಗತ್ಯ ವಸ್ತುಗಳ ಬೆಲೆ ಏರುತ್ತಾ ಇದೆ. ಸಾಮಾನ್ಯ ಪ್ರಜೆ ಇಂದು ಏನು ಕಷ್ಟಪಡುತ್ತಿದ್ದಾನೆ ಎನ್ನುವುದನ್ನು ಸರ್ಕಾರ ಅರಿಯಬೇಕು. ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ. ವಾಸ್ತವ ಪರಿಸ್ಥಿತಿ ನೋಡುವುದಾದರೆ, ಈ ಸಭೆಯಲ್ಲಿ ಈ ಬೆಲೆಗಳ ಏರಿಕೆ ಬಗ್ಗೆ ಬಗ್ಗೆ ನಾಲ್ಕಾರು ಬಾರಿ ಚರ್ಚೆಯಾಗಿದೆ. ಇವತ್ತು ಹಳ್ಳಿಗಳಲ್ಲಿ ಸೀಮೆಎಣ್ಣೆ ಸಿಕ್ಕುತ್ತಾ ಇಲ್ಲ, ಸಕ್ಕರೆ ಸಿಕ್ಕುತ್ತಾ ಇಲ್ಲ ವ್ಯವಸಾಯಕ್ಕೆ ಬೇಕಾಗಿರತಕ್ಕ ಡೀಸೆಲ್ ಸಿಕ್ಕುತ್ತಾ ಇಲ್ಲ.

ಇವೆಲ್ಲವು ಸಿಗತಕ್ಕ ಪ್ರಯತ್ನವನ್ನು ಮಾಡಿದ್ದಾರೆಯೋ ? ರಾಜ್ಯಪಾಲರ ಬಾಯಲ್ಲಿ ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರೆಂದು ಹೇಳಿಸಿದ್ದರೆ ಚೆನ್ನಾಗಿತ್ತು.

ಅಲ್ಲಿಂದ ಮುಂದೆ ತಾವು ಜನರಿಗೆ ನೀರನ್ನು ಕುಡಿಸುವ ಬಗ್ಗೆ ಪ್ರಸಾಪಸಿ ಹಳ್ಳಿಗಾಡಿನಲ್ಲಿ ಬೋರ್ ವೆಲ್‌ಗಳನ್ನು ಹಾಕಿ ನೀರನ್ನು ಕೊಡುತ್ತೇವೆಂದು ಮಾನ್ಯ ರಾಜ್ಯಪಾಲರಿಂದ ಹೇಳಿಸಿದ್ದೀರಿ. ೩೦ ವರ್ಷಗಳಿಂದಲೂ ಈ ರಾಜ್ಯದಲ್ಲಿ ಸರ್ಕಾರ ಇದ್ದರೂ ಕೂಡ ಪ್ರತಿಯೊಬ್ಬರಿಗೂ ಕುಡಿಯುವುದಕ್ಕೆ ಒಳ್ಳೆಯ ನೀರನ್ನು ಕೊಡುವುದಕ್ಕಾಗಲಿಲ್ಲ ಎಂದು ಹೇಳಿದರೆ ನಾವು ಎಷ್ಟರ ಮಟ್ಟಿಗೆ ಸಫಲರಾಗಿದ್ದೇವೆಂದು ತಾವು ಊಹಿಸಿಕೊಳ್ಳಬಹುದು. ಇದರ ಬಗ್ಗೆ ಪ್ರತಿ ವರ್ಷದ ರಾಜ್ಯಪಾಲರ ಭಾಷಣದಲ್ಲೂ ನೀರು ಕೊಡುತ್ತೇವೆ ಎಂಬ ಬಗ್ಗೆ ಹೇಳುತ್ತಲೇ ಬಂದಿದ್ದಾರೆ. ಈ ದಿಸೆಯಲ್ಲಿ ಮೊದಲು ಹೆಜ್ಜೆಯಾಗಿ. ಬಳ್ಳಾರಿ, ಗುಲ್ಬರ್ಗ ಕೆ.ಜಿ.ಎಫ್. ಚಿತ್ರದುರ್ಗ. ತುಮಕೂರು, ಹೊಸಪೇಟೆ, ಅರಸೀಕೆರೆ ಮತ್ತು ಭದ್ರಾವತಿ ಮುಂತಾದ ಪ್ರದೇಶಗಳಲ್ಲಿ ನೀರು ಸರಬರಾಜು ಯೋಜನೆಯನ್ನು ತಮ್ಮ ಕರ್ನಾಟಕ ನಗರ ಪ್ರದೇಶಗಳ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿಗೆ ವಹಿಸುತ್ತೇವೆಂದು ಹೇಳಿದ್ದೀರಿ. ಯಾವ ಆಧಾರದ ಮೇಲೆ ಇದನ್ನು ಹೇಳಿದ್ದೀರಿ ? ಇದರ ಬಗ್ಗೆ ಒಂದು ಉದಾಹರಣೆಯನ್ನು ತಮಗೆ ಕೊಡಬೇಕೆಂದರೆ, ನಾನು ಪ್ರತಿನಿಧಿಸುವಂತಹ ಚಾಮರಾಜನಗರ ೩೫ ಸಾವಿರ ಜನಸಂಖ್ಯೆ ಇರುವಂತಹ ಒಂದು ಕ್ಷೇತ್ರ. ಅಲ್ಲಿ ಇವತ್ತಿನವರೆವಿಗೂ. ಕುಡಿಯುವ ನೀರಿನ ಬಗ್ಗೆ ಒಂದು ಸರಿಯಾದ ವ್ಯವಸ್ಥೆಯನ್ನು ಮಾಡಿಲ್ಲ. ಇವುಗಳನ್ನೆಲ್ಲಾ ಯಾವ ಆಧಾರದ ಮೇಲೆ ಮಾಡಿದ್ದೀರಿ ? ಆದುದರಿಂದ ೧೦ ಸಾವಿರ ಜನಸಂಖ್ಯೆಗಿಂತ ಹೆಚ್ಚು ಪ್ರಜಾಸಂಖ್ಯೆ ಇರುವಂತಹ ಪ್ರತಿಯೊಂದು ಪಟ್ಟಣದಲ್ಲೂ ಕುಡಿಯುವ ನೀರನ್ನು ಸರಬರಾಜು ಮಾಡುವಂತಹ ಜವಾಬ್ದಾರಿಯನ್ನು ಈ ಅರ್ಬನ್ ವಾಟರ್ ಸಪ್ಲೈ ಬೋರ್ಡಿಗೆ ಕೊಡುವಂತಹ ತೀರ್ಮಾನವನ್ನು ತೆಗೆದುಕೊಳ್ಳುತ್ತೀರಾ ? ಆ ದಿಸೆಯಲ್ಲಿ ನೀವು ಕೆಲಸ ಮಾಡಿದ್ದೇ ಆದರೆ ನಿಮ್ಮನ್ನು ನಾನು ಮೆಚ್ಚುತ್ತಿದ್ದೆ. ಈ ಬಗ್ಗೆ ಹೆಚ್ಚಿನ ಪ್ರಯತ್ನ ಮಾಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಮಾನ್ಯ ರಾಜ್ಯಪಾಲರು ಮುಂದೆ ಇನ್ನೂ ಒಂದು ಮಾತನ್ನು ಹೇಳಿದ್ದಾರೆ.

"Apart from this, we are committed to seing that the qualiy of service given by the Road Transport Corporation is improved. We will endeavor to reduce the traffic congeation in Bangalore city by developing the ring road and by requesting the Government of India to develop the circular railway. In spite of these steps, we feel it would be difficult to contain the problem of Bangalore City, unless steps are taken to ensure that new industrial enterprises are located well out of the city. My Government is working on a scheme to ensure this."

ಇದರ ಬಗ್ಗೆ ಒಂದು ಉದಾಹರಣೆಯನ್ನು ಕೊಡುವುದಾದರೆ, ಬೆಂಗಳೂರಿನಿಂದ ಮೈಸೂರಿಗೆ ಒಬ್ಬ ಪ್ರಯಾಣಿಕ ಪ್ರಯಾಣ ಮಾಡಬೇಕಾದರೆ ೩ ಗಂಟೆ ಬೇಕಾಗುತ್ತದೆ. ಅದಕ್ಕೆ ಟಿಕೆಟ್‌ಗಳನ್ನು ತೆಗೆದುಕೊಳ್ಳಬೇಕಾದರೆ ೩ ಗಂಟೆ ಕ್ಯೂನಲ್ಲಿ ನಿಲ್ಲಬೇಕು. ಅಷ್ಟೊಂದು ಕಷ್ಟಪಟ್ಟು ಟಿಕೆಟ್‌ನ್ನು ತೆಗೆದುಕೊಂಡು ಬಸ್‌ನಲ್ಲಿ ಪ್ರಯಾಣ ಮಾಡುತ್ತಿರುವಾಗ ದಾರಿ ಮಧ್ಯದಲ್ಲಿ ಅಕಸ್ಮಾತ್ ಬಸ್ ಬ್ರೇಕ್ ಡೌನ್ ಆದರೆ ಅಂದು ಆತನು ಮೈಸೂರನ್ನು ತಲುಪುವಹಾಗೇ ಇಲ್ಲ. ಈ ಬಗ್ಗೆ ಟ್ರಾಫಿಕ್ ಹೆಚ್ಚು ಆದುದನ್ನು ತಿಳಿದುಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಬಸ್‌ಗಳನ್ನು ಹಾಕಬೇಕೆಂದು ತಾವು ಅರ್ಥಮಾಡಿಕೊಂಡಿದ್ದೀರಾ ? ಇವತ್ತು ಬೆಂಗಳೂರು ಸಿಟಿಯಲ್ಲೇ ನೋಡುವುದಾದರೆ, ಫ್ರಿ ಸಿಟಿ ಸರ್ವೀಸ್ ಪ್ರೊವೈಡ್ ಮಾಡಿದ್ದೀರಾ ? ಇಲ್ಲಿ ಓಡಾಡತಕ್ಕಂತಹವರ ಕಷ್ಟ ಏನಿದೆ ಎಂಬುದನ್ನು ಅರಿತುಕೊಂಡು ಅವರಿಗೆ ಸಾಕಾದಷ್ಟು ಬಸ್ ಸರ್ವೀಸನ್ನು ಪ್ರೊವೈಡ್ ಮಾಡಿದ್ದೀರಾ ? ಇದನ್ನು ಮಾಡುವುದಕ್ಕಾಗಲಿಲ್ಲ, ಇದರ ಬಗ್ಗೆ ಮೊದಮೂಲಾಗಿ ಹೇಳಬೇಕಾಗಿತ್ತು. ತಮ್ಮ ಗಮನಕ್ಕೆ ಮತ್ತೊಂದು ವಿಚಾರವನ್ನು ತರುವುದಾದರೆ, ಬಸ್‌ಗಳನ್ನು ರಾಷ್ಟ್ರೀಕರಣ ಮಾಡಿದ್ದರಿಂದ ಇಷ್ಟೆಲ್ಲಾ ಅನಾಹುತಕ್ಕೆ ಕಾರಣವಾಯಿತು. ಇವರು ಅದನ್ನು ಸರಿಯಾದ ರೀತಿಯಲ್ಲಿ ಮಾಡುವುದಕ್ಕಾಗಲಿಲ್ಲ. ಇದನ್ನು ಮೊದಲೇ ಯೋಜನೆ ಮಾಡಬೇಕಾಗಿತ್ತು. ಬಸ್‌ಗಳ ಸಂಖ್ಯೆಯನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರ ಸಾಕಷ್ಟು ಬಂಡವಾಳವನ್ನು ಹಾಕಿ, ಜನರಿಗೆ ಸೌಕರ್ಯವನ್ನು ಕೊಟ್ಟು ಅದರಿಂದ ಲಾಭವನ್ನು ತೆಗೆದುಕೊಳ್ಳುವುದಕ್ಕೆ ಇವರ ಕೈಯ್ಯಲ್ಲಾಗಲಿಲ್ಲ. ಇಷ್ಟು ಕೆಲಸ

ನಿಮ್ಮ ಕೈಯ್ಯಲ್ಲಿ ಆಗಲಿಲ್ಲ ಎಂದು ಹೇಳಿದ ಮೇಲೆ ಈ ಪ್ರಯತ್ನವನ್ನು ಏಕೆ ಮುಂದುವರಿಸುತ್ತಿದ್ದೀರಾ? ಜನಗಳಿಗೆ ಅನುಕೂಲವನ್ನು ಮಾಡಿಕೊಡದಿದ್ದ ಪಕ್ಷದಲ್ಲಿ ಈ ಕಾರ್ಪೊರೇಷನ್ ಮುಚ್ಚಿ ಬಿಡಿ. ನಿಮಗೆ ಶಕ್ತಿ ಇದ್ದರೆ ಮಾಡಿ ಶಕ್ತಿ ಇಲ್ಲದಿದ್ದರೆ ನಿಮಗೆ ಶಕ್ತಿ ಬರುವವರೆಗೆ ಜನರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ರಾಷ್ಟ್ರೀಕರಣ ಮಾಡುವುದು ಬೇಡ, ಜನರಿಗೆ ಸೌಕರ್ಯವನ್ನು ಒದಗಿಸುವುದು ಬಹಳ ಮುಖ್ಯವಾದ್ದರಿಂದ ಡಿ–ನ್ಯಾಷನಲೈಸ್ ಮಾಡಿ ಎಂದು ಹೇಳಿದರೆ, ಇಲ್ಲ ಇಲ್ಲ ಇದು ಸ್ಟೇಟ್ ಪಾಲಿಸಿ ಎಂದು ಹೇಳಿ ಇವತ್ತು ಪ್ರಯಾಣಿಕರಿಗೆ ಸೌಕರ್ಯವನ್ನು ಕಲ್ಪಿಸಿಕೊಡದೆ, ಹಿಂಸೆಯನ್ನು ಕೊಡ ತಕ್ಕಂಥಾದ್ದು ಸರಿಯಾದ ಮಾರ್ಗ ಅಲ್ಲ ಎಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ಕೊಡುವು ದಕ್ಕೆ ಇಚ್ಛಿಪಡುತ್ತೇನೆ.

ಇನ್ನು ಮೇಜರ್ ಇರಿಗೇಷನ್ ವಿಚಾರವಾಗಿ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದೀರಿ. ಕಾಳಿನದಿ ವಿಚಾರದಲ್ಲೂ ಕೂಡ ಹೇಳಿಸಿದ್ದೀರಿ. ಮೇಜರ್ ಇರಿಗೇಷನ್ ವಿಚಾರದಲ್ಲಿ ಹೇಳುವುದಾದರೆ, ಕಾಳಿನದಿ ಪ್ರಾಜೆಕ್ಟ್ ಬಗ್ಗೆಯಾಗಲಿ ಅಥವಾ ಇನ್ನಾವುದೇ ಬೃಹತೆ ಪ್ರಾಜೆಕ್ಟ್‌ಗಳ ವಿಚಾರದಲ್ಲಿಯಾಗಲಿ, ಈ ಸರ್ಕಾರದ ಮೇಲೆ ಹೆಚ್ಚಿನ ಜವಾಬ್ದಾರಿ ಹಾಕುವುದರಿಂದ ಸ್ವಲ್ಪ ಕಷ್ಟವಾಗುತ್ತದೆ. ಏಕೆಂದರೆ ಇದು ಇತ್ತೀಚೆಗೆ ಅಧಿಕಾರಕ್ಕೆ ಬಂದಿರತಕ್ಕಂತಹ ಸರ್ಕಾರ, ಆದುದರಿಂದ ನಿಮ್ಮ ಮೇಲೆ ಈ ಜವಾಬ್ದಾರಿ ಬರುವುದಿಲ್ಲ. ಹಾಗೆಂದ ಮಾತ್ರಕ್ಕೆ ಜವಾಬ್ದಾರಿ ಇಲ್ಲ ಎಂದು ತಾವು ಭಾವಿಸಬಾರದು. ಮೇಜರ್ ಇರಿ ಗೇಷನ್‌ಗಳಿಗೆ ನಾವು ಸಾಕಾದಷ್ಟು ಹಣವನ್ನು ಹಾಕಿದ್ದೇವೆ. ಕಬಿನಿ ಪ್ರಾಜೆಕ್ಟನ್ನು ಉದಾಹರಣೆಯ ನ್ನಾಗಿ ತೆಗೆದುಕೊಳ್ಳುವುದಾದರೆ, ಸುಮಾರು ೮೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅಣೆ ಕಟ್ಟನ್ನು ನಿರ್ಮಾಣ ಮಾಡಿದ್ದೇವೆ. ಸುಮಾರು ೧೦ವರ್ಷಗಳಿಂದಲೂ ನೀರನ್ನು ತಡೆದು ನಿಲ್ಲಿಸಿದ್ದೇವೆ.ಆದರೆ ೨ ಸಾವಿರ ಎಕರೆಗೆ ನೀರನ್ನು ಕೊಟ್ಟಿಲ್ಲ. ಕಾರಣ ಏನೆಂದರೆ, ಮೇಜರ್ ಚಾನಲ್ಸ್‌ಗಳು ಆಗಿಲ್ಲ,ಬ್ರಿಡ್ಜ್‌ಸ್ ಆಗಿಲ್ಲ ಆಕ್ವಿಡೆಕ್ಟ್ ಆಗಿಲ್ಲ, ಆದ್ದರಿಂದ ಸರ್ಕಾರ ತೀವ್ರಗತಿಯಿಂದ ಇದನ್ನು ಮಾಡಬೇಕಾಗುತ್ತದೆ. ಯಾವಾ ಗಲೂ ಇಂತಹ ಪ್ರಾಜೆಕ್ಟ್‌ಗಳನ್ನು ಮಾಡಬೇಕಾದರೆ,ನೀರನ್ನು ತಡೆಯುವುದಕ್ಕೆ ಸರಿಯಾಗಿ ಚಾನಲ್ಸ್‌ಗಳು ರೆಡಿಯಾಗ ಬೇಕು. ಆ ರೀತಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡಿದ ಪಕ್ಷದಲ್ಲಿ ಹೆಚ್ಚಿನ ಅನುಕೂಲ ಈ ರಾಜ್ಯದ ಜನರಿಗೆ ಕೊಡಬಹುದು, ಆದರೆ ರಾಜ್ಯಪಾಲರಿಂದ ಪೊಳ್ಳು ಭಾಷಣ ಮಾಡಿ ಸಿದ್ದಾರೆ. ಈದಿಸೆಯಲ್ಲಿ ಕೆಲಸ ಮಾಡಿದ ಪಕ್ಷದಲ್ಲಿ ಹೆಚ್ಚಿನ ಅನುಕೂಲವನ್ನು ಮಾಡುವುದಕ್ಕೆ ಆಗುತ್ತದೆ. ಇದನ್ನು ಮಾಡಬೇಕೆಂದು ಸಲಹೆ ಮಾಡುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಇನ್ನು ಭೂಸುಧಾರಣೆಯ ಬಗ್ಗೆ ಹೇಳುವುದಾದರೆ ಹೊಸದಾಗಿ ಬಂದಂತಹ ಈ ಸರ್ಕಾರ ಏನು ಮಾಡಿದೆ ಅಂದರೆ ಹಾಲಿ ಭೂನ್ಯಾಯ ಮಂಡಲಿಯಲ್ಲಿರುವ ಸದಸ್ಯರೆಲ್ಲರೂ ರಾಜೀನಾಮೆ ಕೊಡಬೇಕು ಎಂಬು ದಾಗಿ ಆಜ್ಞೆಯನ್ನು ಹೊರಡಿಸಿದೆ. ಹಾಗಾದರೆ ಹಾಲಿ ಭೂನ್ಯಾಯ ಮಂಡಲಿಯಲ್ಲಿ ಕೆಲಸ ಮಾಡು ತ್ತಿದ್ದವರೆಲ್ಲಾ ನಾಲಾಯಕ್ ಎಂದುತೀರ್ಮಾನ ಮಾಡಿದ್ದೀರಾ ? ಏಕೆ ಈ ರೀತಿ ಮಾಡುತ್ತೀರಿ ಎಂದು ನಾನು ಕೇಳುತ್ತೇನೆ. ಭೂನ್ಯಾಯ ಮಂಡಲಿಗಳು ಅನೇಕ ಕಡೆಗಳಲ್ಲಿ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿಲ್ಲ ಎಂಬುದಾಗಿ ನಿಲ್ಲಿಸಿದ್ದೀರಾ ಅಥವಾ ಮತ್ತೆ ಇನ್ನಾವ ದೃಷ್ಟಿಯಿಂದ ನಿಲ್ಲಿಸಿದ್ದೀರಿ? ಭೂನ್ಯಾಯ ಮಂಡಲಿ ಅಂದರೆ ಯಾವ ಸರ್ಕಾರ ಬರುತ್ತದೋ ಆ ಸರ್ಕಾರ ಬರುತ್ತದೋ ಆ ಸರ್ಕಾರ ತಮಗೆ ಬೇಕಾದಂತಹ ೪ ಜನರನ್ನು ಈ ಭೂನ್ಯಾಯ ಮಂಡಲಿಯಲ್ಲಿ ಸದಸ್ಯ ರನ್ನಾಗಿ ಮಾಡುವುದು, ಮತ್ತೆ ತಮ್ಮ ಪಕ್ಷದಲ್ಲಿ ಕೆಲಸ ಮಾಡಿದಂತಹವರನ್ನು ಸದಸ್ಯರನ್ನಾಗಿ ಮಾಡುವುದು ಭೂಸುಧಾರಣೆ ಎಂಬುದಾಗಿ ತಾವೇನಾದರೂ ತಿಳಿದುಕೊಂಡಿದ್ದರೆ ಬಹುಶ: ಅದು ಶುದ್ಧ ತಪ್ಪು. ಭೂಸುಧಾರಣೆಯಲ್ಲಿ ನಂಬಿಕೆ ಇರತಕ್ಕಂತಹ ಜನ ಈ ಕಡೆಯಲ್ಲೂ ಇದ್ದಾರೆ. ಅದಕ್ಕಾಗಿ ನಾವು ನಿನ್ನೆ ತಾನೆ ಭೂಸುಧಾರಣೆಯ ಬಗ್ಗೆ ಸರ್ಕಾರ ತಂದಂತಹ ತಿದ್ದುಪಡಿಯನ್ನು ಪಾಸು ಮಾಡಿಕೊಂಡಿದ್ದೇವೆ. ಅದಕ್ಕೆ ಈ ಬಗ್ಗೆ ಸರ್ಕಾರದ ಭಾವನೆ ಏನು ? ಭೂನ್ಯಾಯ ಮಂಡಲಿಯಲ್ಲಿ ತಮ್ಮ ಜನ ಇರಬೇಕು, ತಮ್ಮ ಜನ ಇದ್ದರೆ ಮಾತ್ರ ನ್ಯಾಯ ಸಿಗುತ್ತದೆ, ಬೇರೆ ಜನ ಇದ್ದರೆ ನ್ಯಾಯ ಸಿಗುವುದಿಲ್ಲ ಎಂದು ತಾವು ಏನಾ ದರೂ ತಿಳಿದು ಕೊಂಡಿದ್ದ ಪಕ್ಷದಲ್ಲಿ ಬಹುಶ: ತಾವು ಸರಿಯಾದ ರೀತಿಯಲ್ಲಿ ಯೋಚನೆ ಮಾಡುತ್ತಿಲ್ಲ ಎಂದು ಮಾತ್ರ ಹೇಳ ಬೇಕಾಗುತ್ತದೆ. ನ್ಯಾಯವನ್ನು ಕೊಡತಕ್ಕಂಥದ್ದು ಪ್ರತಿಯೊಬ್ಬರ ಧರ್ಮ. ಇದರಲ್ಲಿ ನಂಬಿಕೆ ಇರತಕ್ಕಂತಹ ನೀವು, ಭೂಸುಧಾರಣೆಯ ನ್ಯಾಯ ಮಂಡಲಿಯ ಸಮಿತಿಗಳು ಕೆಲಸ ಮಾಡದಹಾಗೆ ತೆಗೆದುಹಾಕಿದ್ದು ಒಳ್ಳೆಯದಲ್ಲ. ಇದರಿಂದ ಜನಗಳಿಗೆ ಅನುಕೂಲವಾಗುತ್ತದೆಂದು ನಾನು

ಅಂದುಕೊಂಡಿಲ್ಲ. ಭೂಸುಧಾರಣೆ ಅಂದರೆ ಒಂದು ವಿಷಯ ಬೆಳೆದು ಬಂದು ಬಿಟ್ಟಿದೆ. ಅದೇನೆಂದರೆ, ಉಳುವವನಿಗೆ ಭೂಮಿ, ಅವನಿಗೆ ೮೮ ಎಕರೆ ಜಮೀನು ಇದ್ದರೂ ಅವನು ಇನ್ನೊಂದು ಕಡೆ ಗೇಣಿದಾರನಾಗಿದ್ದರೆ ಅದನ್ನೂ ಕೊಡಬೇಕು.

ಮತ್ತೆ ಎಜುಕೇಷನ್ ಬಗ್ಗೆ ಒಂದು ಮಾತನ್ನು ರಾಜ್ಯಪಾಲರ ಬಾಯಲ್ಲಿ ಹೇಳಿಸಿದ್ದೀರಿ, ಅದೇನೆಂದರೆ. "My Government will also intensify efforts to vocationalise education to achieve the twin objectives of training educatedyouth for gainful employment and reducing the unnecssary pressure on admission to colleges".

ದುರಾದೃಷ್ಟವಶಾತ್ ಯಾರು ಎಜುಕೇಷನ್ ಮಿನಿಸ್ಟರ್ ಆಗಿರುತ್ತಾರೆ, ಅವರು ನೀತಿ ನಿರೂಪಣೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ, ಆದರೆ ನೀತಿಯ ಬಗ್ಗೆ ಭಾಷಣ ಮಾಡುತ್ತಾರೆ. ರಾಜ್ಯಪಾಲರ ಭಾಷಣದಲ್ಲಿ ಈ ಮಾತನ್ನು ಹೇಳಿಸಿದ್ದೀರಿ. ಇದನ್ನು ಮಾಡಿ ತೋರಿಸಿ, ಯಾರು ಬೇಡ ಎಂದು ಹೇಳುತ್ತಾರೆ,

† ಮೈಕೆಲ್ ಫೆರ್ನಾಂಡಿಸ್ (ಭಾರತಿ ನಗರ).— ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಸಲ್ಲಿಸುವ ವಿಚಾರ ಏನು ಇದೆ ಅದಕ್ಕೆ ನನ್ನ ವಿರೋಧವನ್ನು ವ್ಯಕ್ತ ಪಡಿಸುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯಪಾಲರ ಈ ಭಾಷಣವನ್ನು ತಯಾರು ಮಾಡಿ ನೀವು ಕೊಟ್ಟ ಅಂಕಿ ಅಂಶಗಳ ಆಧಾರದ ಮೇಲೆ ಅವರದನ್ನು ಮಾಡಿರುತ್ತಾರೆ, ಇದು ಕೇವಲ ಫಾರ್ಮ್ಯಾಲಿಟಿಗೋಸ್ಕರ ಇದನ್ನು ಮಾಡಿರುತ್ತಾರೆ ಅವರಿಗೆ ಇದರ ಮೇಲೆ ನಂಬಿಕೆ ಇಲ್ಲ. ಜನರು ಸದನದ ವಿಫಲತೆ ಪಟ್ಟಿಯನ್ನು ಏನೂ ಕಾಣುತ್ತಿಲ್ಲ. ಶ್ರೀಮಾನ್ ದೇವರಾಜ್ ಅರಸ್ ಅವರ ಬಗ್ಗೆ ಒಂದೆರಡು ಸರ್ಟಿಫಿಕೇಟ್ ಕೊಟ್ಟ ಹಾಗೆ ಕಾಣುತ್ತದೆ, ಆದರೆ ಭಾಷಣದ ಮೊದಲ ಭಾಗದಲ್ಲಿ ಚುನಾವಣೆಯ ಬಗ್ಗೆ ಮಾತನಾಡಿದ್ದಾರೆ. ಚುನಾವಣೆಯಲ್ಲಿ ದೇಶವನ್ನು ಚಕಿತಗೊಳಿಸುವ ಒಂದು ರೀತಿಯಲ್ಲಿ ನಡೆದಿದೆ ಎಂದು ಹೇಳಿರುವುದನ್ನು ನೋಡಿದರೆ ನಿಜ ಇರಬಹುದು. Adversity makes strange bed follows. politics also make bed fellows strange. ನಿಮ್ಮ ರೀತಿಯಲ್ಲಿ ಚುನಾವಣೆ ನಡೆದಿದೆ, ಕಾರಣ ೭೮ನೇ ಇಸವಿಯ ಕೊನೆ ಭಾಗದಲ್ಲಿ ಶ್ರೀಮತಿ ಇಂದಿರಾಗಾಂಧಿಯವರನ್ನು ತಮ್ಮ ಭುಜದ ಮೇಲೆ ಎತ್ತಿಕೊಂಡು ಶ್ರೀಮಾನ್ ಅರಸ್‌ರವರು ಶ್ರೀಮತಿ ಗಾಂಧಿಯವರ ಚುನಾವಣೆಯನ್ನು ಗೆಲ್ಲಲು ಪ್ರಯತ್ನ ಮಾಡಿದರು. ಆಗ ಶ್ರೀಮಾನ್ ವೀರೇಂದ್ರ ಪಾಟೀಲರನ್ನು ಶ್ರೀಮಾನ್ ಜಾರ್ಜ್ ಫೆರ್ನಾಂಡಿಸ್‌ರವರು ಎತ್ತಿಕೊಂಡು ಚುನಾವಣೆಯಲ್ಲಿ ಓಡಾಡಿದರು. There was non-performing Government, you must elect a Government which provides stability. ಈಗ ಶ್ರೀಮಾನ್ ವೀರೇಂದ್ರ ಪಾಟೀಲರು ಶ್ರೀಮತಿ ಇಂದಿರಾಗಾಂಧಿಯವರ ಜೊತೆಯಲ್ಲಿದ್ದಾರೆ ಶ್ರೀಮಾನ್ ದೇವರಾಜ್ ಅರಸ್ ಮತ್ತು ಶ್ರೀಮಾನ್ ಜಾರ್ಜ್ ಫೆರ್ನಾಂಡಿಸ್‌ರವರು ಏನು ಅಂದು ಮಾಡಿದರು ಇಂದು ನೋಡಿದರೆ ಅದು ಕೂಡ ಚಕಿತಗೊಳಿಸುವಂತೆ ಆಗಿದೆ. ಕಾರಣ ಈ ರಾಜ್ಯಪಾಲರ ಭಾಷಣವನ್ನು ತಯಾರು ಮಾಡುವಾಗ ನಮ್ಮ ಕರ್ನಾಟಕ ರಾಜ್ಯದ ಮಂತ್ರಿಮಂಡಲದಲ್ಲಿ ಕೇವಲ ಮೂರು ಜನ ಮಾತ್ರ ಮಂತ್ರಿಗಳು ಇದ್ದರು. ಈ ಮೂರು ಜನ ಮಂತ್ರಿಗಳಿಗೆ ಕಷ್ಟವಾಗುತ್ತದೆಂದು ಒಂದು ಪುಟ್ಟ ಭಾಷಣವನ್ನು ತಯಾರು ಮಾಡಿದಂತೆ ಕಾಣುತ್ತದೆ. ಆದರೆ ಈಗ ಸಂಪುಟ ವಿಸ್ತರಣೆ ಆಗಿದೆ. ಆದರೆ ಸರ್ಕಾರದಲ್ಲಿ ಉತ್ಸಾಹವಿಲ್ಲ, ನಿರುತ್ಸಾಹ ಕಂಡು ಬರುತ್ತಿದೆ, ಇದು ಕೂಡ ಒಂದು ರೀತಿಯ ಚಕಿತವಾದ ವಿಚಾರವಾಗಿದೆ. ಕಾರಣ ಏನು ಅಂದರೆ ಡಿಫೆಕ್ಟರ್ಸ್‌ಗಳಿಂದ ಕೂಡಿದ್ದೆ ಎಂದು ನಮ್ಮ ಕರ್ನಾಟಕದ ಯುವಕ ಕಾಂಗ್ರೆಸ್ ಅಂದರೆ ಕೆಪಿಸಿಸಿ (ಐ) ಯೂತ್‌ನವರು ಈಗ ಇರುವ ಅಸೆಂಬ್ಲಿಯನ್ನು ವಿಸರ್ಜನೆ ಮಾಡಬೇಕೆಂದು ಯುವಕ ಕಾಂಗ್ರೆಸ್‌ನ ಅಧ್ಯಕ್ಷರು ಮತ್ತು ಅದರ ಪದಾಧಿಕಾರಿಗಳು ಹೇಳುತ್ತಿದ್ದಾರೆ. ಇದು ಒಂದು ಕಾರಣ ಎಂದು ತಿಳಿಯಬಹುದು. ಆ ರೀತಿ ಹೇಳುವುದಾದರೆ ಹರಿಯಾಣದಲ್ಲಿ ಆಗಿದ್ದ ಜನತಾ ಸರ್ಕಾರವನ್ನು ವಿರೋಧಿಸಿ ಆ ರಾಜ್ಯದಲ್ಲಿ ಮೂರುವರೆ ವರ್ಷಗಳಿಂದ ನಡೆಸಿಕೊಂಡು ಬಂದು ಇವತ್ತು ಕಾಂಗ್ರೆಸ್ "ಐ" ಮತಾಂತರವಾಗಿದೆ, ಇನ್ನು ಗೋವಾದಲ್ಲಿ ಮೊನ್ನೆ ನಡೆದಂತ ಚುನಾವಣೆಯಲ್ಲಿ ಕಾಂಗ್ರೆಸ್ "ಯು" ಪಕ್ಷ ಸರ್ಕಾರ ರಚನೆ ಮಾಡಿದ್ದು ಅದೂ ಕೂಡ ಇವತ್ತು ಕಾಂಗ್ರೆಸ್ (ಐ) ಎಂದು ಪರಿವರ್ತನೆಯಾಗಬೇಕಾದರೆ ಅಂತಹ ಸರ್ಕಾರಗಳು ಮುಂದುವರಿದುಕೊಂಡು ಹೋಗುತ್ತಿರುವಾಗ ನಮ್ಮ ಕರ್ನಾಟಕ ಸರ್ಕಾರವನ್ನು ವಿಸರ್ಜನೆ ಮಾಡಬೇಕೆಂದು ಹೇಳುವುದು

ಸರಿಯಲ್ಲ, ಯಾವುದೇ ಆದರೂ ಅದು ಲಾಜಿಕ್ ಆಗಿ ಇರಬೇಕು, ಇಲ್ ಲಾಜಿಕ್ ಆಗಿರಬಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ರಾಜ್ಯಪಾಲರ ಭಾಷಣದಲ್ಲಿ ಬೆಲೆ ಏರಿಕೆ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನು ನೋಡಿದರೆ ಶುಗರ್ ಕೆರೋಸಿನ್ ಮತ್ತು ಈರುಳ್ಳಿಯ ಬೆಲೆ ವಿಪರೀತವಾಗಿದೆ ಯೆಂದು ಚುನಾವಣೆಗಳ ಕಾಲಕ್ಕೆ ಅದನ್ನೇ ಒಂದು ದೊಡ್ಡ ವಿಷಯವನ್ನಾಗಿ ಮಾಡಿಕೊಂಡು ಕಾಂಗ್ರೆಸ್ (ಐ) ನವರು ಜನರ ಮುಂದೆ ಓಟನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡಿ ಮತ್ತೆ ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಇದನ್ನು ಉಪಯೋಗಿಸಿಕೊಂಡರು ಜೊತೆಗೆ ಶ್ರೀಮತಿ ಇಂದಿರಾಗಾಂಧಿಯವರು ಜನರ ಮುಂದೆ ಕಣ್ಣೀರು ಸುರಿಸಿಕೊಂಡು ಬಂದರು ಆಗ ಸಕ್ಕರೆಯ ಬೆಲೆ ೪-೪೦ ಇದ್ದದ್ದು ಚುನಾವಣೆ ಕಳೆದ ಕೆಲವು ದಿನಗಳಲ್ಲಿ ಅದು ೪-೨೦ಕ್ಕೆ ಇಳಿದಿದ್ದು ಒಂದು ಆಕರ್ಷಣೆಯಾಗಿ ಇನ್ನು ಮುಂದೆ ಎಲ್ಲಾ ಬೆಲೆಗಳು ಇಳಿಯುತ್ತವೆಂದು ಜನರು ಭಾವಿಸಿದ್ದರು. ಆದರೆ ಈಗ ಆಗಿರುವುದೇನು ಎಂದರೆ ಚುನಾವಣೆಗಳ ಮೊದಲು ಏನು ೪-೪೦ ಇದ್ದದ್ದು ಇವತ್ತು ೧೦ ರೂಪಾಯಿ ಆಗಿದೆ ಆದರೂ ಇದರ ಬಗ್ಗೆ ಯಾರು ಬಾಯಿ ತೆಗೆದಿಲ್ಲ, ಇದಕ್ಕೆ ಕಾರಣವೇನು? ಇದರ ಬಗ್ಗೆ ಶ್ರೀಮತಿ ಇಂದಿರಾಗಾಂಧಿಯವರು ಏತಕ್ಕೆ ಬಾಯಿ ಮುಚ್ಚಿಕೊಂಡಿದ್ದಾರೆ ಈ ಬೆಲೆಯ ವಿಚಾರದಲ್ಲಿ ಈ ಪಕ್ಷದ ಯಾರಿಗೂ ಕಾಣುತ್ತಿಲ್ಲವೇ? ಇನ್ನು ಈ ಬೆಲೆ ಏರಿಕೆಗಳ ಬಗ್ಗೆ ಒಂದು ಪ್ರಿವೆಂಟೀವ್ ಡಿಟೆನ್ಷನ್ ಆಕ್ಟ್ ಕೂಡ ಮಾಡಿದ್ದಾರೆ. ಅದರಲ್ಲಿ ವರ್ತಕರನ್ನು ಮತ್ತು ಕಾಳಸಂತೆಕೋರರನ್ನು ಒಳಕ್ಕೆ ಹಾಕಬಹುದು, ಆದರೆ ಹಾಕುವುದಿಲ್ಲ ಕಾರಣವಾದರೂ ಇಷ್ಟೆ, ಜನತಾ ಸರ್ಕಾರ ಇದ್ದಾಗ ಆ ಸಮಯದಲ್ಲಿ ಈ ಕಾನೂನು ಇರಲಿಲ್ಲ ಆಗ ಮೂರು ರೂಪಾಯಿಗೆ ಸಕ್ಕರೆ ಸಿಗುತ್ತಿತ್ತು. The I.A.S. Officers who are better placed in life are retired at the age of 58 where as the class IV, security guards are retired at the age of 55. ಅಧಿಕಾರಿ ವರ್ಗದವರು ಮತ್ತು ವರ್ತಕರು ಶಾಮೀಲಾಗಿ ಚುನಾವಣೆ ಕಾಲಕ್ಕೆ ಏನು ವರ್ತಕರು ಪಕ್ಷಕ್ಕೆ ಹಣ ಕೊಟ್ಟಿದ್ದಾರೆ ಮತ್ತೆ ಬಡ ಜನರ ಓಟು ಸಿಕ್ಕಬೇಕು ಅದಕ್ಕೋಸ್ಕರ ಇಷ್ಟೆಲ್ಲಾ ನಡೆಯಿತು. ಆದರೆ ಈ ವರ್ತಕರು ಏನು ಚುನಾವಣೆಗಾಗಿ ಕೊಟ್ಟಿದ್ದಾರೆ ಅದನ್ನು ಬಡವರಿಂದ ವಾಪಸ್ ತೆಗೆದುಕೊಳ್ಳಲೇ ಬೇಕು ಆದರಿಂದ ಈ ಬೆಲೆಯನ್ನು ಇಳಿಸುವುದಕ್ಕೆ ಮತ್ತು ಇಷ್ಟು ಬೆಲೆ ಹೇರಲು ಕಾರಣರಾದವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದ ರೀತಿಯಲ್ಲಿ ಇದೆ. ಆದ್ದರಿಂದ ಯಾವ ರೀತಿ ನಿಮ್ಮ ಸರ್ಕಾರದ ಮೇಲೆ ಅವರ ಶಕ್ತಿ ಇದೆ ಎಂದು ತಿಳಿದುಕೊಳ್ಳಬಹುದು.

ಶ್ರೀ ಎಂ. ವೀರಪ್ಪ ಮೋಯಿಲಿ.— ಇದೇ ಭಾಷಣವನ್ನು ಮೊನ್ನೆ ಗುಲ್ಬರ್ಗಾದಲ್ಲಿ ನಡೆದಂತಹ ಚುನಾವಣೆಯ ಸಂದರ್ಭದಲ್ಲಿ ಮಾಡಿದ್ದೀರಿ? ಆದರೆ ಅದರಿಂದ ಏನು ಪ್ರಯೋಜನವಾಗಿಲ್ಲ.

ಶ್ರೀ ಮೈಕೆಲ್ ಫೆರ್ನಾಂಡಿಸ್.— ಈ ಸಾರಿ ಚುನಾವಣೆಯಲ್ಲಿ ಸುಮಾರು ೬೦ ಜನ ದೊಡ್ಡ ದೊಡ್ಡ ವರ್ತಕರು ಬಂದಿದ್ದಾರೆ. ಇಷ್ಟು ಪ್ರಮಾಣದಲ್ಲಿ ಲೋಕಸಭೆಯಲ್ಲಿ ಎಂದೂ ಇರಲ್ಲಿಲ್ಲ. ಆದ್ದರಿಂದಾಗಿ ನಾವು ಒಂದು ರಾಜ್ಯಪಾಲರ ಭಾಷಣದಲ್ಲಿ ಏನು ಭರವಸೆ ಇದೆ ಅದನ್ನು ನಂಬುವುದಕ್ಕೆ ಸಾಧ್ಯವಿಲ್ಲ. ಆದರೆ ಬೆಲೆಯನ್ನು ಕಡಿಮೆ ಮಾಡುತ್ತೇವೆಂದು ಹೇಳಿದ್ದಾರೆ ಇದನ್ನು ನಂಬಲಿಕ್ಕಿಲ್ಲ. ಇನ್ನು ವಿಜಯನಗರ ಸ್ಟೀಲ್ ಪ್ಲಾಂಟ್ ಬಗ್ಗೆ ೭೮ನೇ ಇಸವಿಯ ಎಲೆಕ್ಷನ್‌ನಲ್ಲಿ ಜನರಿಂದ ಓಟು ತೆಗೆದುಕೊಳ್ಳಲಿಕ್ಕೆ ಹೇಳಿದ್ದರು ಭೂಕಾರೋ ಸ್ಟೀಲ್ ಪ್ಲಾಂಟ್‌ಗೆ ಈಗಾಗಲೇ ೭-೮ ವರ್ಷಗಳಾದವು ಆದರೂ ಅಲ್ಲಿ ಇನ್ನು ೩ ಕೋಟಿ ರೂಪಾಯಿ ಖರ್ಚು ಮಾಡಲಿಲ್ಲ. ಇದನ್ನು ಯಾವಾಗ ಪೂರೈಸುತ್ತೇವೆ ಅಥವಾ ಪ್ರಾರಂಭವಾಗುತ್ತದೆ. ಏನು ಎನ್ನುವ ಸೂಚನೆ ಇಲ್ಲ. ಕೇವಲ ಜನರ ಕಣ್ಣಿಗೆ ಮಣ್ಣೆರೆಚುವ ಕೆಲಸವಾಗಿದೆ. ಇನ್ನು ಗೌರ್ನಮೆಂಟ್ ಎಂಪ್ಲಾಯಿಸ್ ಅಂದರೆ ಸರ್ಕಾರಿ ನೌಕರರಿಗೆ ಬಹಳ ಅನುಕಂಪ ತೋರಿಸುತ್ತಿದ್ದಾರೆ ಅದು ಏನು ಎಂದರೆ ಬೆಟರ್ ಪೇ ಸ್ಕೇಲ್ ಮತ್ತು ಬೆಟರ್ ಸರ್ವೀಸ್ ಕೊಡುತ್ತೇವೆಂದು ಹೇಳುತ್ತಾ ಬಂದಿದ್ದಾರೆ. ಸರ್ಕಾರಿ ನೌಕರರು ತಮ್ಮ ಸೇವಾ ಅವಧಿಯನ್ನು ೫೮ಕ್ಕೆ ಏರಿಸಬೇಕೆಂದು ಕೇಳುತ್ತಿದ್ದಾರೆ ಅದರ ಬಗ್ಗೆ ಏನು ಹೇಳುತ್ತಾರೋ? ಅದರೆ ಅದೇ ಐ.ಎ.ಎಸ್. ಅವರನ್ನು ಒಳ್ಳೆಯ ಸ್ಥಿತಿಯಲ್ಲಿಟ್ಟಿದ್ದಾರೆ ಅವರಿಗೆ ೫೮ ವರ್ಷದ ಮಿತಿಯನ್ನು ಇಟ್ಟಿರುವಾಗ ಕೇವಲ ಕ್ಲಾಸ್ ಫೋರ್ ಮತ್ತು ಸೆಕ್ಯೂರಿಟಿ ಗಾರ್ಡ್ ಮುಂತಾದವರಿಗೆ ಆ ಸೌಲಭ್ಯವನ್ನು ಕೊಡುವುದಕ್ಕೆ ಇವರಿಗೆ ಮನಸ್ಸು ಬಂದಂತೆ ಕಾಣುವುದಿಲ್ಲ. ಅವರ ಸೇವಾ ಅವಧಿಯಲ್ಲಿ ತಮ್ಮ ಮಕ್ಕಳ ಮದುವೆ ಮುಂಜಿಗಳನ್ನು ಮುಗಿಸಿರುವುದಿಲ್ಲ ಆದರಿಂದ ಅವರುಗಳಿಗೆ ಸೇವಾ ಅವಧಿಯ ಕೊನೆಯಲ್ಲಿ ಅನೇಕ ತೊಂದರೆಗಳು ಇರುತ್ತವೆ.

೪,೩೦ ಪಿ.ಎಂ.

ಆ ಒಂದು ವಯಸ್ಸಿನಲ್ಲಿ ಅವರಿಗೆ ಮಕ್ಕಳನ್ನು ಶಾಲೆಗೆ ಕಳುಹಿಸುವುದು, ಮಕ್ಕಳ ಮದುವೆ ಮಾಡುವುದು, ಮತ್ತು ಮಕ್ಕಳನ್ನು ಒಂದು ಮಟ್ಟಕ್ಕೆ ತರುವಂತಹ ಒಂದು ಕೆಲಸ ಆ ವಯಸ್ಸಿನಲ್ಲಿ ಹೆಚ್ಚಿಗೆ ಬರುತ್ತದೆ. ಅಂಥಾ ಸಂದರ್ಭದಲ್ಲಿ ಸರ್ಕಾರಿ ನೌಕರರನ್ನು ೫೫ನೇ ವಯಸ್ಸಿಗೆ ಸರ್ಕಾರದವರು ರಿಟೈರ್ ಮಾಡುವುದಾದರೆ ಅವರು ಅಷ್ಟರೊಳಗೇ ಎಲ್ಲಾ ಕಾರ್ಯಗಳನ್ನು ಮುಗಿಸಬಹುದು. ಅವರಿಗೆ ಸರ್ಕಾರದವರು ಕೊಡತಕ್ಕ ಸಂಬಳ ಸಾಲುವುದಿಲ್ಲ. ಆಗ ಏನು ಮಾಡುತ್ತಾರೆ ಅಂದರೆ ಲಂಚ ತೆಗೆದು ಕೊಳ್ಳುವುದಕ್ಕೆ ಪ್ರಾರಂಭ ಮಾಡುತ್ತಾರೆ. ಅವರು ಲಂಚ ತೆಗೆದುಕೊಳ್ಳುತ್ತಾರೆಯೋ ಇಲ್ಲವೋ ನನಗೆ ಖಚಿತವಾಗಿ ಗೊತ್ತಿಲ್ಲ. ಪರಿಸ್ಥಿತಿಗಳ ಒತ್ತಡದಿಂದಾಗಿ ಅವರಿಗೆ ಲಂಚ ತೆಗೆದುಕೊಳ್ಳುವ ಭಾವನೆ ಬರ ಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಈಗ ಲಂಚ ಸವಿಸ್ತಾರವಾಗಿ ಬೆಳೆದಿದೆ. ಅದು ಮೇಲ್ಮಟ್ಟದಲ್ಲಿ ಜಾಸ್ತಿ ಇದೆ. ಕೆಳಮಟ್ಟದಲ್ಲಿ ಕಡಿಮೆ ಇದೆ. ಯಾರೂ ಲಂಚ ತೆಗೆದುಕೊಳ್ಳಬಾರದು ಎಂದು ಕಾನೂನು ಮಾಡಿದರೆ ಆಗ ಏನಾದರೂ ಲಂಚಗುಳಿತನ ಕಡಿಮೆಯಾಗಬಹುದು ಎಂದು ಕಾಣು ತ್ತದೆ. ಒಟ್ಟಿನಲ್ಲಿ ಸರ್ಕಾರಿ ನೌಕರರಿಗೆ ೫೮ ವರ್ಷ ವಯಸ್ಸಿನವರೆಗೂ ಸರ್ವೀಸ್‌ನಲ್ಲೇ ಉಳಿದು ಸರ್ಕಾರಕ್ಕೆ ಸೇವೆ ಸಲ್ಲಿಸುವಂತಹ ಅವಕಾಶವನ್ನು ಕಲ್ಪಿಸಬೇಕು. ೫೮ನೇ ವರ್ಷಕ್ಕೆ ಸರ್ಕಾರಿ ನೌಕರರು ರಿಟೈರ್ ಆಗುವ ಹಾಗೆ ಮಾಡಬೇಕು ಎಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ಕೆಲವು ನಿಮಿಷಗಳ ಕಾಲ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

SRI B. B. SAYANAK (Belgaum).—Sir, I oppose this motion moved by Sri Krishnappa. I would like to make a few observations in this behalf.

In the Governor's Address, there is one paragraph in Kannada which my friend has read out to me it and translated to me In that paragraph. there is a mention about the results of the recent Lok-Sabha Elections.

In the general elections of 1977, the then and the present Prime Minister Mrs. Indira Gandhi was defeated. In India, that was the first time that a Prime Minister was defeated along with here Party. The Janatha Party had won the elections and ruled for two and half years. It is a sad thing to see that the Party which had got an honest and good Prime Minister Mr. Morarji Desai, could not complete its full term for which the peoplc had voted for.

In the year 1976, the then Prime Minister Mrs. Indira Gandhi declared emergency in India, and curbed the rights of the Press and wishes of the people and arrested a great leader Sri Jay Prakash Narain who was like her father. Jay Prakash Narain had requested all the opposition parties to unite and form the Janata Party. Accordingly, they formed the Janatha Party and won the elections. But it is a sad thing to note that even through the Janatha Party did so many good things, it could not rule the country for five years for which the people had given their mandate. In this connection. I would like to mention that when Sri Madhu Dandavate was the Railway Minister, he prepared the Railway Budget with a surplus that too without increasing passanger fares for likewise three consecutive years. This is hattrick

he had make that is a grate thing. There were so many Ministers who were honest and intelligent. But what has happened is, their good work has not appeared in the Press; their quarrels have appeard in the press and as a result, that Party has been defeated.

After this, the Lok Dal came to power. As Sri Charan Singh could not prove his majority in the Parliament, his Government also has gone-

Later on elections were declared and Mrs. Indira Gandhi and her Party won the elections in January, 1980. I should say that after her thirty-three months 'Vanavasa' Mrs. Indira Gandhi has come to power again. It is a great thing and a great achievement. Why was she elected because there was a quarrel between the different groups in the Janata Party. That is the only criterian on which the Congress-I Party won the elections.

During her election campaign, Mrs. Indira Gandhi criticised the Janata Party like any thing that there was no sugar, kerosene and others essential commodities. She also criticised that there was no gold even for the "Mangal Sutra" of women. Women were moved by hearing this because our women folk are emotional one. They were under the impression that it was correct and were not knowing that gold prices depend upon the international market. After the Lok Sabha Election, Prices of Gold had come down ? I want to ask Mrs. Indira Gandhi as to why the prices of essential commodities like Kerosene, Sugar etc., are going up instead of coming down ? While the Janatha Party was ruling, there was no shortage of sugar and the price per kilo gram of sugar was Rs. 2.25. Is it a downward trend or upward trend ? And what about kerosene and Diesel ? In our area, people use pumpsets which run on diesel and there is no diesel available now. There is queue for diesel due to shortage of diesel, our crops are withering away. What the present Government is doing ? Even though the prices were soaring, in the recent by-elections to the Lok Sabha, our people have voted for Mrs. Indira Gandhi. This is the plight of Indian Democracy. Nobody cared for soaring prices. People saw the photo of Indira Gandhi and voted for her candidates. This is a pity of our democracy.

Sir, now I will come to my most important question. There is a boundary dispute between Karnataka and Maharashtra which is pending from the last 23 years. There is no mention in the Governor's Address about this boundary dispute. When Sri Devaraj Urs was the Chief Minister, there was no mention about this. He was silent on this issue; whether the boundary dispute is solved or not. He is not worried I give compliments to our Hon. Chief Minister Sri Gundu Rao,

who has taken up this issue and is telling the public that he will take up the same with the Central Government. Let the Central Government give the decision; I am going to abide by this decision.

Sir, when Mrs. Indira Gandhi was the Prime Minister in the Fifth Lok Sabha, she had catagorically assured to Sri Dandavathe, the then Member of the Lok Sabha, that she would solve the Maharashtra-Karnataka Boundary dispute before the general election to the Sixth Lok Sabha. But she did not keep her promise and she was defeated in the Sixth Lok Sabha.

In the Sixth Lok Sabha. Mr. H. M. Patel, who was the then Home Minister of India, had convened a Meeting and called both the Chief Ministers of Maharashtra and Karnataka. But Sri Devaraj Urs, the then Chief Minister of Karnataka, did not go there and attended the Meeting whereas Sri Pawar, the then Chief Minister of Maharashtra, had gone there, I and my collegues have meet Sri H. M. Patel and he wanted to solve this dispute but could not do so because Sri Devaraj Urs did not attend that Conference becaose he was ill. I request the Hon'ble Chief Minister Sri Gundu Rao and his colleagues must take this issue to the Central Government and see that it is solved immediately. My Karnataka friends are asking for Kasargod on the basis contiguity, simple majority, village of a unit and wishers. of the people. We have won the last five elections on this issue. My friend Sri Deve Gowda and the then Chief Minister Sri Devaraj Urs knew that the border dispute is pending, and they had set up their candidate in all the constituencies of Belgaum District, but in Belgaum City they set up only one candidate against me.

ಶ್ರೀ ಎಚ್. ಡಿ. ದೇವೇ ಗೌಡ.—ಗಡಿ ಸಮಸ್ಯೆ ಪರಿಹಾರವಾದರೆ ಮಾನ್ಯ ಸದಸ್ಯರಾದ ಸಯನಕ್ ಅವರು ಇಲ್ಲಿಗೆ ಬರುವುದಕ್ಕೆ ತೊಂದರೆಯಾಗುತ್ತದೆ. ಅದಕ್ಕೋಸ್ಕರ ಅವರು ಇನ್ನೂ ಐದು ವರ್ಷ ಗೆದ್ದು ಬರಲಿ ಎಂದು ನಮ್ಮ ಆಶೆ.

SRI J. H. PATEL.—Sri Naganoor was set up as a candidate in Belgaum.

SRI B. B. SAYANAK.—What my friend says is not correct. Sri Naganoor was a week candidate. What is the percentage of muslims in Belgaum. Their percentage is good the muslim candidate was selected because the percentage of muslims is more in Belgaum, Sri Morarji Desai had come for the propoganda to support Sri Naganoor and he had stated that it was good that both the parties had come together and set-up one candidate against the M.E.S. candidate. Even then I got more than 12,000 votes and I won the election. I want to ask my friends what right you have over Belgaum ? we have been winning the Belgaum seat during the last five elections, and in all the border areas

we have been winning all the seats. If my friends are true democrats they must tell the Central Government that they have no claim over Belgaum. You have been asking for Kasargod on language issue, Villages as unit relative majourity contiguity and the wishes of the people, and I am one of these who say that you must get Kasargod for Karnataxa. But, if yon want Sholapur Kolhapur, Bombay please have some principle. You can take even Bombay if you are in majority. You want Kollahpur and Sholapur on what basis ? Please adopt the same basis that you are adopting for Kasargod.

ಶ್ರೀ ಪಿ. ರಾಮದೇವ್.—ಮಹಾಜನ್ ಕಮಿಷನ್ ವರದಿಯನ್ನು ಒಪ್ಪಿಕೊಳ್ಳಬೇಕು ಎಂದು ಹೇಳುತ್ತಿದ್ದವರು ನೀವೆ. ಈಗ ಅದನ್ನು ಏಕೆ ಒಪ್ಪಿಕೊಳುತ್ತಿಲ್ಲ ? ಮಹಾಜನ್ ಕಮಿಷನ್ ವರದಿ ಬಂದ ಮೇಲೆ ಪ್ರತಿಕೂಲ ವಾಗಿದೆಯೆಂದು ತಾವು ಒಪ್ಪಿಕೊಳ್ಳುತ್ತಿಲ್ಲವೇ ? Why they are going back on their own stand ?

Sri B. B. Sayanak.—Sir. my friend is talking about the Mahajan Commission Report. There was Fazal Ali Commission Report and it was not implement by the Central Government in tots. So many changes took place and Bombay was given to Maharashtra, How Karnataka got Bellary ? They got it on the basis of language, contiguity and wishes of the people. But on what basis they want Belgaum ? Mahajan Commission's report is only a recommedation and not an award.

Sir, about the Kannada language I have no grudge ; I have the highest respect for Kannada language. Kannada is my sister language in Belgaum there is a Kannada Sahitya Sammelan. It is not a Sahitya Sammelan but it is a border Sammelan. In that Sammelan our the Chief Minister Sri Gundu Rao spoke about the border dispute, and Sri R S. Patil, the former Minister also spoke. On border dispute the President of the Sahitya parishat spoke on border dispute Belgaum City Corporation has paid One lakh of rupees to this Sammelan, whereas when the Marati Patrakar asked for one lakh rupees it was not given to them Though the Corporation first sanctioned the one lakh rupees for it border it was rejected when they thought that the Resolution would be passed in it. I want to ask why this discrimination ? Why they did not give money to the Marathi Patrakar Parishad ? Is it because that they will pass border resoultion. I request my friends once who are insisting for Kannada, the Members of Pariliament and the Minister from Karnataka to speak in Kannada in Parliament and not to speak in English or any other language. The Chief Minister is going to Delhi very often. When he is proud of Kannada language, he must speak to the Prime Minister and others in Kannada only.

All our Ministers and Members of Parliament and M.L.As want Kannada to become the official languge. I want to know why they are sending their children to Convent Schools ? Why there is a queue for admission to the Convent Schools ? If they are proud of their Kannada language, let them not send their children to the Convent schools. Let them send their children only to the Kannada schools and stop the Convent Schools.

SRI S. R. BOMMAI.—Sir, there is no language problem for my hon friend's children.

SRI B. B. SAYANAK.— If you want to make education compulsory, you must have school buildings, but sufficient school buildings are not there. In my constituency there is a school No. 13 which was constructed by the Maharaja of Sangli State. It collapsed 7 years ago but uptill now it has not been reconstructed. Like that there are so many buildings which have not been constructed not only in Belgaum but in other places also. For instance, there is one Balwade Village in Nippani Constituency and in the school building there are only two rooms to accommodate 70 Marathi boys. The Kannada people there want them to start a Kannada section there only for 6 boys. We have no objection if they want to construct a separate room for them They do not want to do that but want a separate room in that school building. Their intention is to take over this school building for Kannada boys, With these few words I conclude my speech.

† ಶ್ರೀ ಜೆ. ಎಚ್. ಪಟೇಲ್ (ಚನ್ನಗಿರಿ).—ಮಾನ್ಯ ಅಧ್ಯಕ್ಷರೇ, ಈ ಸದನದ ಮುಂದೆ ಇರತಕ್ಕಂಥ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ಪ್ರಸ್ತಾಪ ಏನಿದೆ, ಇದನ್ನು ಯಾವ ಭಾಷೆಯಲ್ಲಿ ವಿಶ್ಲೇಷಣೆ ಮಾಡಬೇಕೆಂದು ನನಗೆ ಹೊಳೆಯುತ್ತಿಲ್ಲ.

ಕೆಲವು ಮಾನ್ಯ ಸದಸ್ಯರು.—ಕನ್ನಡ ಭಾಷೆಯಲ್ಲಿ ;

ಶ್ರೀ ಜೆ. ಎಚ್. ಪಟೇಲ್.—ಕನ್ನಡದಲ್ಲಿಯೂ ನಾನಾ ನಮೂನೆಗಳಿವೆ. ಈ ರಾಜ್ಯಪಾಲರ ಭಾಷಣ ನೋಡಿದ ಮೇಲೆ ಮೂರೂವರೆಕೋಟಿ ಕನ್ನಡಿಗರ ಭವಿಷ್ಯದ ಬಗ್ಗೆ ಸಂಪೂರ್ಣವಾದ ಜವಾಬ್ದಾರಿಯಿಂದ ಚಿಂತನೆ ಮಾಡಿದಂಥ ಸರ್ಕಾರ ಹೇಳತಕ್ಕಂಥ ಮಾತುಗಳು ಇವೆಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಈ ಹಿಂದಿನ ವರ್ಷಗಳ ರಾಜ್ಯಪಾಲರ ಭಾಷಣಗಳನ್ನೂ ನೋಡಿದ್ದೇನೆ. ಅಂದರೆ ಅವೆಲ್ಲಾ ಪರಿಪೂರ್ಣವಾದಂಥ ರಾಜ್ಯಪಾಲರ ಭಾಷಣಗಳೆಂದು ನಾನು ಹೇಳುವುದಿಲ್ಲ. ಕಳೆದ ಒಂದು ವರ್ಷದಲ್ಲಿ ನಡೆದಿರತಕ್ಕಂಥ ಘಟನೆಗಳು, ಮುಂದೆ ಏನು ಮಾಡುವವರಿದ್ದಾರೆ ಎಂಬುದನ್ನು ಸೂಕ್ಷ್ಮವಾಗಿ ತೋರಿಸತಕ್ಕಂಥ ಒಂದು ನೀತಿಯನ್ನು ನಿರೂಪಿಸತಕ್ಕಂಥ ಪ್ರಯತ್ನವನ್ನು ಈ ಹಿಂದಿನ ರಾಜ್ಯಪಾಲರ ಭಾಷಣಗಳಲ್ಲಿ ಮಾಡಿದ್ದಾರೆ, ಆದರೆ ಈ ವರ್ಷದ ರಾಜ್ಯಪಾಲರ ಭಾಷಣ ಬಹಳ ಬೇಜವಾಬ್ದಾರಿಯುತವಾಗಿದೆ ಎಂದು ಹೇಳಬಹುದು. ಬಹುಶಃ ಇಲ್ಲಿಯವರೆಗೆ ಯಾರು ಮುಖ್ಯಮಂತ್ರಿಗಳಾಗಿದ್ದಾಗಲೂ ಸಹ ಇಂತಹ ಒಂದು ಬೇಜವಾಬ್ದಾರಿಯುತವಾದಂಥ ಭಾಷಣವನ್ನು ಈ ಸದನದ ಮುಂದೆ ಯಾವ ಕಾಲದಲ್ಲಿಯೂ ಇಟ್ಟಿರಲಿಲ್ಲವೆಂದು ಹೇಳಬಹುದು. ಈ ಮೊದಲಿನ ರಾಜ್ಯಪಾಲರ ಭಾಷಣಗಳಲ್ಲಿ ಬಹಳ ವಿವಾದಾಸ್ಪದವಾದಂಥ ಸಮಸ್ಯೆಗಳ ಬಗ್ಗೆಯಾಗಲೀ, ಆಗದಿರತಕ್ಕಂಥ ಕೆಲಸಗಳನ್ನು ಆಗಿದೆ ಎಂದು ಒಪ್ಪಿಕೊಂಡಿರುವ ಬಗ್ಗೆಯಾಗಲೀ, ಬಹಳ ಒಳ್ಳೆಯ ಕೆಲಸಗಳಾಗಿವೆ ಎಂಬ ಬಗ್ಗೆಯಾಗಲೀ ಹೇಳಿರಬಹುದು.

ಆದರೆ ಅದನ್ನೆಲ್ಲಾ ಜವಾಬ್ದಾರಿಯಿಂದ ಹೇಳಿದ್ದಾಗಿದ್ದರೆ, ಈಗ ೧೯೮೦ರಲ್ಲಿ ಬಂದಿರತಕ್ಕಂಥ ರಾಜ್ಯಪಾಲರ ಭಾಷಣ ಸಂಪೂರ್ಣವಾಗಿ ಬೇಜವಾಬ್ದಾರಿಯಿಂದ ಕೂಡಿದಂಥ ಒಂದು ಚಿಕ್ಕ ವರದಿಯಾಗಿದೆ. ಇದರಲ್ಲಿ ಎಷ್ಟು ಬೇಜವಾಬ್ದಾರಿಯಾಗಿ ಹೇಳಿದ್ದಾರೆಂದರೆ, ಮೊದಲನೆಯ ಪ್ಯಾರಾದಲ್ಲಿ ಯಾವ ರೀತಿ ಹೇಳಿದ್ದಾರೆಂದರೆ ಲೋಕಸಭಾ ಚುನಾವಣೆಯ ಜೊತೆಗೆ ರಾಜ್ಯದ ವಿಧಾನಸಭೆಗಳಿಗೂ ಚುನಾವಣೆ ನಡೆದಿದ್ದರೆ ಮತ್ತು ಹೊಸದಾಗಿ ಸದಸ್ಯರು ಇಲ್ಲಿಗೆ ಆರಿಸಿ ಬಂದಿದ್ದತೆ ಯಾವ ಮಾತುಗಳನ್ನು ಹೇಳಬೇಕಾಗಿತ್ತೋ, ಅಂತಹ ಮಾತುಗಳನ್ನು ಇಲ್ಲಿ ಹೇಳಿದ್ದಾರೆ ಮತ್ತು ಕೊನೆಯ ಪ್ಯಾರಾದಲ್ಲಿ ಈ ರೀತಿ ಹೇಳಿದ್ದಾರೆ.—

"ರಾಜ್ಯದ ಜನತೆ ನಿಮ್ಮಲ್ಲಿ ಅಪಾರ ವಿಶ್ವಾಸ ಮತ್ತು ನಂಬಿಕೆಯನ್ನು ವ್ಯಕ್ತ ಪಡಿಸಿದ್ದಾರೆಂಬುದನ್ನು ಮತ್ತು ನಿಮ್ಮಿಂದ ಅವರು ಹೆಚ್ಚಿನ ಕಾರ್ಯತತ್ಪರತೆಯನ್ನು ನಿರೀಕ್ಷಿಸುತ್ತಾರೆ ಎಂಬುದನ್ನು ನಿಮಗೆ ನಾನು ಪುನ: ಹೇಳಬೇಕಾಗಿಲ್ಲ ;"

ಅಂದರೆ ಈಗ ಇಲ್ಲಿರತಕ್ಕಂಥ ವಿಧಾನಸಭಾ ಸದಸ್ಯರು ಲೋಕಸಭಾ ಚುನಾವಣೆಯ ಜೊತೆಯಲ್ಲಿಯೇ ಹೊಸದಾಗಿ ಆರಿಸಿ ಬಂದಿರತಕ್ಕಂಥ ಸದಸ್ಯರು ಎಂಬ ಆಲೋಚನೆ ಇಟ್ಟುಕೊಂಡು ಈ ರೀತಿ ಹೇಳಿದ್ದಾರೆ. ಆದರೆ ಈಗ ಇಲ್ಲಿರತಕ್ಕಂಥ ಸರ್ಕಾರ ಎಂಥಾದ್ದು ಎಂದರೆ, ಅಕ್ರಮವಾಗಿ ಹುಟ್ಟಿದಂಥ ಶಿಶು ಎಂದು ಹೇಳಬಹುದು. ಹೇಗೆಂದರೆ, ಜನರು ಶ್ರೀಮತಿ ಇಂದಿರಾ ಗಾಂಧಿಯವರಿಗೆ ಓಟು ಕೊಟ್ಟಿದ್ದಾರೆಂಬುದು ನಿಜ. ಅದನ್ನು ಯಾರೂ ಅಲ್ಲಗಳೆಯುವುದಿಲ್ಲ. ಜನರು ಹಲವಾರು ಕಾರಣಗಳಿಂದ ಶ್ರೀಮತಿ ಇಂದಿರಾಗಾಂಧಿ ಅವರಿಗೆ ಓಟು ಕೊಟ್ಟರು. ಮಾನ್ಯ ಬಸವಲಿಂಗಪ್ಪನವರು ೧೯೪೭ನೇ ಇಸವಿಯಿಂದ ಹಿಡಿದು ಇಲ್ಲಿಯವರೆಗೆ ನಡೆದಂಥ ಕಾಂಗ್ರೆಸ್ ಪಕ್ಷದ ಚರಿತ್ರೆಯನ್ನೆಲ್ಲಾ ಹೇಳಿದರು. ಅದೇ ರೀತಿ ನಾನೂ ಸಹ ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಜನತಾ ಪಕ್ಷದ ಸರ್ಕಾರ ಕೇಂದ್ರದಲ್ಲಿದ್ದಾಗ, ಅದು ತನ್ನ ಶಕ್ತಿ ಮೀರಿ ಕೆಲಸ ಮಾಡಿ ಈ ದೇಶದ ಹಲವಾರು ಸಮಸ್ಯೆಗಳನ್ನು ಬಗೆಹರಿಸಿತು. ಅದು ಇಷ್ಟೆಲ್ಲಾ ಒಳ್ಳೆಯ ಕೆಲಸಗಳನ್ನು ಮಾಡಿದರೂ ಕೂಡ ಅಂತ್ಯದಲ್ಲಿ ಕೆಲವು ರಾಜಕೀಯ ವಿಘಟಣೆಗಳು ಆದಂತೆ, ಕಾಂಗ್ರೆಸ್ ಪಕ್ಷದಲ್ಲಿಯೂ ಸಹ ಸರ್ವಾಧಿಕಾರಿ ಶಕ್ತಿಯ ವಿರುದ್ಧ ಹೋರಾಟ ಮಾಡತಕ್ಕಂಥ ಒಂದು ಹೊಸ ಚೈತನ್ಯ ಕಾಂಗ್ರೆಸ್ ಪಕ್ಷದಲ್ಲಿಯೇ ಹುಟ್ಟಿದ್ದರಿಂದ ಆ ಪಕ್ಷ ವಿಭಜನೆ ಆಯಿತು. ಶ್ರೀ ದೇವರಾಜಅರಸ್ ಅವರ ನೇತೃತ್ವದಲ್ಲಿ ಬೇರೆ ಒಂದು ಕಾಂಗ್ರೆಸ್ ಪಕ್ಷ ರಚನೆಯಾಯಿತು, ಹೀಗೆ ಹಲವಾರು ಕಾರಣ ಗಳಿಂದ ದೆಹಲಿಯಲ್ಲಿ ಹೊಸ ಸರ್ಕಾರ ಅಧಿಕಾರಕ್ಕೆ ಬರಲು ಕಾರಣವಾಯಿತು. ಈ ಒಂದು ರಾಜಕೀಯ ಪ್ರವಾಹ ಹಲವಾರು ದಿಕ್ಕಿನಲ್ಲಿ ಹರಿದಿದ್ದರಿಂದ ಮತ್ತು ಜನರು ಯಾವುದೋ ಕಾರಣಗಳನ್ನಿಟ್ಟುಕೊಂಡು ಶ್ರೀಮತಿ ಇಂದಿರಾ ಗಾಂಧಿ ಅವರಿಗೆ ಓಟು ಕೊಟ್ಟರು. ಈ ಒಂದು ಜನತೆಯ ತೀರ್ಪಿನಿಂದ ದೆಹಲಿಯಲ್ಲಿ ಔರಂಗಜೇಬನ ಸರ್ಕಾರ ಇದೆ ಎಂದ ಮಾತ್ರಕ್ಕೆ ಇಲ್ಲಿ ಮೀರ್ ಖಾಸಿಂನ ಆಡಳಿತ ಜಾರಿಗೆ ಬರಬಹುದೇ ? ಶ್ರೀಮತಿ ಇಂದಿರಾಗಾಂಧಿ ಅವರು ಪ್ರಧಾನ ಮಂತ್ರಿಯಾಗಲಿ ಎಂದು ಜನರು ಓಟು ಕೊಟ್ಟರೇ ಹೊರತು ಇಲ್ಲಿ ಶ್ರೀ ಗುಂಡೂರಾವ್ ಅವರು ಮುಖ್ಯಮಂತ್ರಿಗಳಾಗಲಿ ಎಂದು ಅಲ್ಲ. ಶ್ರೀ ದೇವರಾಜ ಅರಸ್ ಅವರನ್ನು ಜನರು ಕೈ ಬಿಟ್ಟರು ಎಂದ ಮಾತ್ರಕ್ಕೆ ಇವರಿಗೆ ಅಧಿಕಾರ ಕೊಡಬೇಕೆ ? ಇವರು ಹೊಸದಾಗಿ ಯಾವ ಯಾವ ಕ್ಷೇತ್ರಗಳಿಂದ ಆರಿಸಿ ಬಂದರು ? ಶ್ರೀ ಗಟ್ಟಿ ಚಂದ್ರಶೇಖರ್ ಅವರಂತಹ ಪುಕ್ಕಲು ಮನುಷ್ಯರಿಂದಲೇ ಈ ಸರ್ಕಾರ ಹುಟ್ಟಿರುವುದು. ಇಲ್ಲದಿದ್ದರೆ ಇದೂ ಸಹ ಡಿಸಾಲ್ವ್ ಆಗುತ್ತಿತ್ತು. ಬಹಳ ಜನ ಸದಸ್ಯರುಗಳಿಗೆ ಹೊಸದಾಗಿ ಚುನಾವಣೆ ನಡೆಸುವುದು ಬೇಡವಾಗಿದೆ. ಚುನಾವಣೆಗೆ ಹೋದರೆ ಬಹಳ ಕಷ್ಟವಿದೆ ಎಂದು ತಿಳಿದುಕೊಂಡಿರುವಂತಹ ಸದಸ್ಯರುಗಳೇ ಭಯಪಟ್ಟುಕೊಂಡು ಎಂಥಾದ್ದೋ ಒಂದು ಸರ್ಕಾರವಿರಲಿ, ಅದು ಕುರುಡು ಸರ್ಕಾರವಾದರೂ ಆಗಲಿ, ಕುಂಟು ಸರ್ಕಾರವಾದರೂ ಆಗಲಿ, ಕಿವುಡ ಸರ್ಕಾರವಾದರೂ ಆಗಲಿ, ನಾವು ಕೇಳುವ ಪ್ರಶ್ನೆಗಳು ಸರ್ಕಾರಕ್ಕೆ ಅರ್ಥವಾಗಲಿ ಅಥವಾ ಆಗದಿರಲಿ ಒಂದು ಸರ್ಕಾರ ಎಂದು ಇದ್ದರೆ ಸಾಕು, ಹೇಗೋ ಒಂದು ಹರಕು ಮುರಕು ಕೊಡೆ ಹಿಡಿದುಕೊಂಡು ಹೊಟ್ಟೆ ಹೊರೆದುಕೊಳ್ಳಲು ಅವಕಾಶವಾಗುತ್ತದೆ ಎಂದು ಹೇಳುವಂತಹ ಸದಸ್ಯರ ತಲೆಯ ಮೇಲೆ ಇರುವಂತಹ ಸರ್ಕಾರ ಇದು.

ಶ್ರೀ ಜಿ. ಕೆ. ತಕ್ಕೇಡ್.—ಮಾನ್ಯ ಸದಸ್ಯರೂ ಸಹ ಜನತಾ ಪಕ್ಷದಿಂದ ಆರಿಸಿ ಬಂದು ಅನಂತರ ಶ್ರೀ ದೇವರಾಜ ಅರಸು ಅವರಿಗೆ ಬೆಂಬಲ ಕೊಟ್ಟು ಅವರ ಸರ್ಕಾರವನ್ನು ಪೋಷಿಸಿಕೊಂಡು ಬರಲಿಲ್ಲವೇ ?

ಶ್ರೀ ಜೆ. ಎಚ್. ಪಟೇಲ್.—ತಾವು ಎಷ್ಟೇ ತಪ್ಪುಗಳನ್ನು ಮಾಡಿದರೂ ಸಹ ಇದೊಂದು ಮಾತನ್ನು ಸರಿಯಾಗಿ ಹೇಳಿದಿರಿ. ನಾನು ಜನತಾ ಪಕ್ಷದಿಂದಲೇ ಆರಿಸಿ ಬಂದಿದ್ದು. ಆದರೆ ಕೆಲವೊಂದು ವಿಚಾರಗಳಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಬಂದಂತೆ ಜನತಾ ಪಕ್ಷದಲ್ಲಿಯೂ ಭಿನ್ನಾಭಿಪ್ರಾಯಗಳು ಬಂದಿದ್ದರಿಂದ

ಜನತಾ ಪಕ್ಷದವರು ನನ್ನನ್ನು ಪಕ್ಷದಿಂದ ಹೊರಗೆ ಹಾಕಿದರು. ಆ ಸಮಯದಲ್ಲಿ ಶ್ರೀಮತಿ ಇಂದಿರಾಗಾಂಧಿಯವರನ್ನು ವಿರೋಧ ಮಾಡತಕ್ಕಂಥ ಒಂದು ಐತಿಹಾಸಿಕವಾದಂಥ ತೀರ್ಮಾನವನ್ನು ಶ್ರೀ ದೇವರಾಜಅರಸ್ ಅವರು ತೆಗೆದುಕೊಂಡಿದ್ದರಿಂದ ನಾನು ಅವರಿಗೆ ಬೆಂಬಲ ಕೊಟ್ಟೆ. ಇದು ಎಲ್ಲರಿಗೂ ಗೊತ್ತಿದೆ.

ಶ್ರೀ ಜಿ ಕೆ. ತಕ್ಕೇಡ್.—ನಾವೂ ಸಹ ಮೊದಲು ಕಾಂಗ್ರೆಸ್ (ಐ) ಪಕ್ಷದಲ್ಲೇ ಇದ್ದೆವು ; ಈಗಲೂ ಅದೇ ಪಕ್ಷದ ಸರ್ಕಾರಕ್ಕೆ ಬೆಂಬಲ ಕೊಡುತ್ತಿದ್ದೇವೆ.

ಅಧ್ಯಕ್ಷರು.—ಇದನ್ನೆಲ್ಲಾ ತಾವು ತಮ್ಮ ಭಾಷಣದಲ್ಲಿ ಹೇಳಿ, ಈಗ ಬೇಡ.

೫-೦೦ ಪಿ. ಎಂ.

ಶ್ರೀ ಜೆ. ಎಚ್. ಪಟೇಲ್.—ನನ್ನ ಮಾನ್ಯ ಮಿತ್ರರಾದ ಶ್ರೀ ಗಟ್ಟಿ ಚಂದ್ರಶೇಖರ್‌ರವರು ಮಾಡಿದ ಪಕ್ಷಾಂತರದಿಂದ ಈ ಸರ್ಕಾರ ಹುಟ್ಟಿತು. ಇಲ್ಲದಿದ್ದರೆ ಈ ಸರ್ಕಾರ ಹುಟ್ಟುತ್ತಾ ಇರಲಿಲ್ಲ. ಮತ್ತು ಅಸೆಂಬ್ಲಿ ಡಿಸಾಲ್ವ್ ಆಗುತ್ತಿತ್ತು.

ಶ್ರೀ ಗಟ್ಟಿ ಚಂದ್ರಶೇಖರ್.—ನಾವು ಡಿಫೆಕ್ಟರ್ಸ್ ಅಲ್ಲ ರಿಫ್ಲೆಕ್ಟರ್ಸ್. ಜನಗಳ ಮನೋಭಾವನೆ ಏನಿದೆ ಅದನ್ನು ನಾವು ಇಲ್ಲಿ ರಿಫ್ಲೆಕ್ಟ್ ಮಾಡುತ್ತೇವೆ. ಅದು ಇಲ್ಲದಿದ್ದರೆ ನಾವು ನೀವು ಇಬ್ಬರೂ ಮನೆಗೆ ಹೋಗುತ್ತಿದ್ದೆವು.

ಶ್ರೀ ಜೆ. ಎಚ್. ಪಟೇಲ್.—ನೀವು ಬರಲಿ ಅಂತ ಅವರು ಹಾಗೆ ಮಾಡಿದ್ದು. ಅದನ್ನು ನಾನು ತಮಾಷೆಗಾಗಿ ಹೇಳುವುದಲ್ಲ. ವಾಸ್ತವಿಕವಾಗಿ ಯಾವೊಬ್ಬ ಮಾನ್ಯ ಸದಸ್ಯರನ್ನು ಕೇಳಿದರೂ ' ಯಾರೋ ಒಬ್ಬ ಚೀಫ್ ಮಿನಿಸ್ಟರ್, ಕೆಪಾಸಿಟಿ ಇರಲಿ ಅಥವಾ ಇಲ್ಲದಿರಲಿ ಚೀಫ್ ಮಿನಿಸ್ಟರ್ ಆದರೆ ಸಾಕು, ೩ ವರ್ಷ ಅಸೆಂಬ್ಲಿ ಮುಂದಕ್ಕೆ ಹೋದರೆ ಸಾಕು ' ಎಂದು ಹೇಳುತ್ತಿದ್ದರು. ಇದು ಎಲ್ಲರ ಅಭಿಪ್ರಾಯ ಆಗಿತ್ತು. ಹೀಗಾಗಿ ಈ ದಿನ ಈ ಸರ್ಕಾರ ಕುಂಟುತ್ತಾ ನಡೆದಿದೆ. ಇವತ್ತು ಈ ಸರ್ಕಾರ ನಡೆಯುವುದಕ್ಕೆ ಇದು ರಾಜಕೀಯ ಹಿನ್ನೆಲೆ. ಇವತ್ತು ಈ ಸರ್ಕಾರದ ಮುಂದೆ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಏನೇನು ಉದ್ದೇಶಗಳು ಇವೆ ಎಂಬ ಬಗ್ಗೆ ಒಂದಾದರೂ ಅಂಶವನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ತೋರಿಸಿದ್ದರೆ ನಾವು ಅದರ ಮೇಲೆ ಮಾತನಾಡಬಹುದಾಗಿತ್ತು. ಆದರೆ ಇದರಲ್ಲಿ ಈ ರೀತಿಯ ಒಂದು ಅಂಶವಾದರೂ ಇಲ್ಲ. ಹಿಂದಿನ ವರ್ಷದ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ' ನಮ್ಮ ರಾಜ್ಯದಲ್ಲಿ ೭೫ ಲಕ್ಷ ಟನ್‌ಗಳಷ್ಟು ಬೆಳೆಯಾಗಿದೆ : ೧೪೧ ಕೋಟಿ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿದ್ದೇವೆ ; ೪೯೧ ಕೋಟಿ ರೂಪಾಯಿಗಳ ಆನ್ಯುಯಲ್ ಪ್ಲಾನ್ ಮಾಡಿದ್ದೇವೆ ; ಇಷ್ಟು ಕೆಲಸ ವಾಗಿದೆ : ಇನ್ನೂ ಇಷ್ಟು ಕೆಲಸಗಳು ಆಗಬೇಕಾದ್ದು ಇದೆ ; ೭ನೇ ಫೈನಾನ್ಸ್ ಕಮೀಷನ್‌ನವರು ಇಷ್ಟು ಹಣ ಕೊಟ್ಟಿದ್ದಾರೆ, ಇಷ್ಟು ಯೋಜನೆಗಳು ಆಗಿವೆ, ಇಷ್ಟು ಯೋಜನೆಗಳು ಆಗಬೇಕಾದ್ದು ಇದೆ, ಎಂಬುದಾಗಿ ಈ ಎಲ್ಲ ವಿವರಗಳು ಕಳೆದ ಸಾಲಿನ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇತ್ತು. ಈ ಯಾವ ವಿವರಗಳೂ ಇದರಲ್ಲಿ ಕಾಣುತ್ತಿಲ್ಲ. ನೀವು ಈ ಸರ್ಕಾರವನ್ನು ವಹಿಸಿಕೊಂಡ ನಂತರ ಮಾನ್ಯ ರಾಜ್ಯಪಾಲರ ಭಾಷಣವನ್ನು ಸೃಷ್ಟಿ ಮಾಡುವ ಸಂದರ್ಭದಲ್ಲಿ ಹಿಂದೆ ಅವರು ಏನು ಹೇಳಿದ್ದರೋ ಅವುಗಳ ಪೈಕಿ ಎಷ್ಟು ಕೆಲಸವಾಗಿದೆಯೋ ಅಷ್ಟನ್ನಾದರೂ ಇದರಲ್ಲಿ ಹೇಳಬಹುದಾಗಿತ್ತು. ಹಿಂದೆ ಮಾನ್ಯ ದೇವರಾಜ ಅರಸ್‌ರವರ ಸರ್ಕಾರದಲ್ಲಿ ಏನೇನು ಕೆಲಸಗಳು ಆಗಿವೆ, ಇನ್ನು ಯಾವ ಕೆಲಸಗಳು ಆಗ ಬೇಕಾಗಿವೆ ಎಂಬ ಬಗ್ಗೆ ಇದರಲ್ಲಿ ಒಂದು ಕಲ್ಪನೆಯೂ ಕೂಡ ಇಲ್ಲ. ಎಲ್ಲಾ ವಿಚಾರಗಳಲ್ಲಿಯೂ ಇಲ್ಲಿ ಏನು ಹೇಳಿದ್ದಾರೆ ಎಂದರೆ, ' ನಾವು ತೀವ್ರವಾಗಿ ಪರಿಶೀಲನೆ ಮಾಡುತ್ತೇವೆ ' ಎಂದು ಹೇಳಿದ್ದಾರೆ, ಅವರ ಎಲ್ಲ ಅಭಿಪ್ರಾಯಗಳು ಇದೆ ತರಹ ಇವೆ. ಯಾವುದರ ಬಗ್ಗೆಯೂ ಒಂದು ಖಚಿತವಾದ ಅಭಿಪ್ರಾಯವಿಲ್ಲ. ಆ ಮೇಲೆ ಈ ನಮ್ಮ ಕನ್ನಡ ಭಾಷೆಯನ್ನು ಆಡಳಿತ ಭಾಷೆಯಾಗಿ ಪರಿಗಣಿಸಿರತಕ್ಕಂಥ ವಿಚಾರದಲ್ಲಿ ಆಡಳಿತ ಹಾಗೂ ಜನತೆಯ ನಡುವೆ ಇನ್ನಷ್ಟು ನಿಕಟ ಹಾಗೂ ಮಧುರ ಬಾಂದವ್ಯವನ್ನು ಏರ್ಪಡಿಸುವ ಸಲುವಾಗಿ ಸರ್ಕಾರದ ಎಲ್ಲ ಮಟ್ಟಗಳಲ್ಲೂ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರಲಾಗಿದೆ. ಸರ್ಕಾರದ ಈ ನಿರ್ಣಯವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಸಲುವಾಗಿ ಈಗಾಗಲೇ ಕೆಲವು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ನಮ್ಮ ಸರ್ಕಾರಿ ಕಚೇರಿಗಳಲ್ಲಿ ವ್ಯಾಪಕವಾಗಿ ಕನ್ನಡದ ಬಳಕೆಯಾಗಬೇಕಾದರೆ ನಾವು ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಕೈ ಕೊಳ್ಳುವುದು ಅಗತ್ಯ. ರಾಜ್ಯ ಸರ್ಕಾರದ ಎಲ್ಲ ಕಚೇರಿಗಳಲ್ಲೂ ಹೆಚ್ಚು ಹೆಚ್ಚಾಗಿ ಕನ್ನಡದ ಬಳಕೆಯಾಗುವಂತೆ ಮಾಡಲು ನಮ್ಮ ಸರ್ಕಾರ ತೀವ್ರ ಕ್ರಮ

ಗಳನ್ನು ಕೈ ಗೊಳ್ಳಲಿದೆ ಎಂದು ಹೇಳಿದ್ದಾರೆ. ಅದು ಯಾವ ಕ್ರಮಗಳು, ಏನು ಎನ್ನುವುದನ್ನು ಇದರಲ್ಲಿ ಹೇಳಿಲ್ಲ. ಇನ್ನು ಸರ್ಕಾರಿ ನೌಕರರ ಕಲ್ಯಾಣದ ವಿಚಾರದಲ್ಲಿ ‘ My Government is concerned about the welfare of Government employees ’ ಎಂದು ಹೇಳಿದ್ದಾರೆ, ಹೀಗೆ ಇಂಗ್ಲೀಷಿನಲ್ಲಿ ಹೇಳಿದರೆ ಸರ್ಕಾರದ ಉದ್ದೇಶ ಏನಿದೆ ಎನ್ನುವುದು ಸ್ಪಷ್ಟವಾಗಿ ಅರ್ಥವಾಗುವುದಿಲ್ಲ. ಆ ಮೇಲೆ ಇನ್ನೊಂದು ವಿಚಾರದಲ್ಲಿ ‘My Government are keen on removing the bottlenecks in implementing the legislation on Urban land Ceiling by rationalising the scheme and by enforcing the provisions under the Act strictly ’ ಎಂದು ಹೇಳಿದ್ದಾರೆ. ಹೀಗೆ ಎಲ್ಲವನ್ನು ತೇಲಿಸಿ ತೇಲಿಸಿ ಹೇಳಿದ್ದಾರೆಯೇ ಹೊರತು ಯಾವುದಕ್ಕೂ ಒಂದು ನಿರ್ದಿಷ್ಟವಾದ ನೀತಿ ಏನಿದೆ ಎಂಬುದನ್ನು ಇದರಲ್ಲಿ ನಿರೂಪಣೆ ಮಾಡಿಲ್ಲ. ಇನ್ನು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ತೆಗೆದುಕೊಂಡರೆ, ನಮ್ಮ ಮಾನ್ಯ ಅರ್ಥ ಸಚಿವರು ಹೊರಗಡೆ ರಾಜಕೀಯವಾಗಿ ಭಾಷಣ ಮಾಡತಕ್ಕಂಥ ಸಂದರ್ಭದಲ್ಲಿ ಆರ್ಥಿಕವಾಗಿ ನಮ್ಮ ರಾಜ್ಯದ ಪರಿಸ್ಥಿತಿ ಚೆನ್ನಾಗಿಲ್ಲ ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ರಾಜ್ಯ ತಾನು ನಿಗದಿ ಮಾಡಿಕೊಂಡಿದ್ದ ಆರ್ಥಿಕ ಗುರಿಗಳನ್ನು ಸಾಧನೆ ಮಾಡಿಲ್ಲ, ಅದನ್ನು ನಾವು ಸಾಧನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಇಲ್ಲ, ನಾವು ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ಹೊರಗಡೆ ಭಾಷಣದಲ್ಲಿ ಹೇಳಿದ ಮೇಲೆ ಅದರ ಮೂಲಭೂತ ರೂಪುರೇಷೆಗಳನ್ನಾದರೂ ಇದರಲ್ಲಿ ಕೊಡಬಹುದಾಗಿತ್ತು. ಆದರೆ ಅದನ್ನು ಇದರಲ್ಲಿ ಕೊಡಲಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರ ತಂದೆಯವರಾದ ಶ್ರೀ ಪಂಡಿತ್ ಜವಹರಲಾಲ್‌ನೆಹರೂರವರು ೧೮ ವರ್ಷಗಳಿಂದ ಹಾಗೂ ಶ್ರೀಮತಿ ಇಂದಿರಾಗಾಂಧಿಯವರು ೧೧ ವರ್ಷಗಳಿಂದ ಈ ರಾಷ್ಟ್ರವನ್ನು ನಿರಾತಂಕವಾಗಿ ಆಳಿದರೂ ಕೂಡ ದೇಶದ ಆರ್ಥಿಕ ಸಮಸ್ಯೆಯನ್ನು ಪರಿಹಾರ ಮಾಡಲಿಲ್ಲ ಶ್ರೀಮತಿ ಇಂದಿರಾಗಾಂಧಿಯವರಾದ ಮೇಲೆ ಆಡಳಿತಕ್ಕೆ ಬಂದ ಜನತಾ ಪಕ್ಷದವರೂ ಸಹ ಏನೂ ಮಾಡಲಿಲ್ಲ. ಈಗ ಮತ್ತೆ ಶ್ರೀಮತಿ ಇಂದಿರಾಗಾಂಧಿಯವರು ಅಧಿಕಾರಕ್ಕೆ ಬಂದಿದ್ದಾರೆ. ೩೦ ವರ್ಷಗಳ ಕಾಲ ತಂದೆ ಮಗಳು ಮಾಡಿದ ಅಪರಾಧಗಳು ಏನು ಎಂಬುದು ತಮಗೆಲ್ಲಾ ಗೊತ್ತಿದೆ. ಆ ಅಪರಾಧಗಳನ್ನೆಲ್ಲಾ ಇವತ್ತು ೨½ ವರ್ಷಗಳ ಕಾಲ ಅಧಿಕಾರದಲ್ಲಿದ್ದಂಥ ಜನತಾ ಪಕ್ಷದ ಸರ್ಕಾರದ ಮೇಲೆ ಹಾಗೂ ೬ ತಿಂಗಳು ಅಧಿಕಾರದಲ್ಲಿದ್ದಂಥ ಶ್ರೀಮಾನ್ ಚರಣಸಿಂಗ್‌ರವರ ಮೇಲೆ ಹಾಕುತ್ತಿದ್ದಾರೆ. ಇದು ಸರಿಯಲ್ಲ. ೩೦ ವರ್ಷಗಳ ಅಧಿಕಾರಾವಧಿಯಲ್ಲಿ ಅವರು ಮಾಡಿದ ತಪ್ಪು ಏನು ಎಂಬುದನ್ನು ನಾವು ತಿಳಿದುಕೊಳ್ಳೋಣ. ಈ ದೇಶವನ್ನು ಆರ್ಥಿಕವಾಗಿ ಅಭಿವೃದ್ಧಿ ಸ್ಥಿತಿಗೆ ತರಲು ಅನೇಕ ಗುರಿಗಳನ್ನು ಇಟ್ಟುಕೊಂಡು ೪ ಅಥವಾ ೫ನೇ ಪಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡದ್ದು ಸರಿ. ಆದರೆ ಈ ದೇಶವನ್ನು ಅಮೇರಿಕಾ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ದೇಶದಲ್ಲಿ ಹಲವು ಅಂತಸ್ತುಗಳ ಕಟ್ಟಡಗಳನ್ನು ಕಟ್ಟಿಸಲು, ಫೈವ್ ಸ್ಟಾರ್ ಹೋಟಲುಗಳನ್ನು ಕಟ್ಟಿಸಲು. ದೊಡ್ಡ ದೊಡ್ಡ ಸಿಟಿಗಳನ್ನು ಅಭಿವೃದ್ಧಿಪಡಿಸಲು ದೊಡ್ಡ ದೊಡ್ಡ ಉದ್ಯಮಗಳನ್ನು ಅಭಿವೃದ್ಧಿಪಡಿಸಲು ಹಣವನ್ನು ಖರ್ಚು ಮಾಡಿ ಈ ದಿಶೆಯಲ್ಲಿ ದೊಡ್ಡ ದೊಡ್ಡ ಬಂಡವಾಳಶಾಹಿಗಳ ನೀತಿಯನ್ನು ಅನುಸರಿಸಿಕೊಂಡು ಬಂದಂಥ ಶ್ರೀಮತಿ ಇಂದಿರಾ ಗಾಂಧಿಯವರು ಇವತ್ತಿನ ದಿವಸ ಏಕಾ ಏಕಿಯಾಗಿ ಜನತಾ ಪಾರ್ಟಿ ಮತ್ತು ಅವರ ಆರ್ಥಿಕ ನೀತಿಯನ್ನು ಕುರಿತು ಏನೂ ಮಾಡಿಲ್ಲ ಎಂಬುದಾಗಿ ಮಾತನಾಡುತ್ತಾರೆ. ಶ್ರೀಮತಿ ಇಂದಿರಾ ಗಾಂಧಿಯವರು ಅವರ ೧೧ ವರ್ಷಗಳ ಆಡಳಿತಾವಧಿಯಲ್ಲಿ ಸಣ್ಣ ಸಣ್ಣ ಉದ್ಯಮಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಮತ್ತು ರೈತರ ಅಭ್ಯುದಯದ ಬಗ್ಗೆ ಎಳ್ಳಷ್ಟು ಗಮನ ಕೊಟ್ಟಿಲ್ಲ. ಈ ದಿಕ್ಕಿನಲ್ಲಿ ಒಂದು ಆರ್ಥಿಕ ನೀತಿಯನ್ನು ಹಾಕಿಕೊಳ್ಳಲಿಲ್ಲ. ಅವರು ಈ ದೇಶದಲ್ಲಿ ದೊಡ್ಡ ದೊಡ್ಡ ಉದ್ಯಮಗಳನ್ನು ಸ್ಥಾಪನೆ ಮಾಡುವ ದಿಕ್ಕಿನಲ್ಲಿ ಒಂದು ಆರ್ಥಿಕ ನೀತಿಯನ್ನು ಅನುಸರಿಸಿದರು. ಈ ದೇಶದಲ್ಲಿ ಸಾಮಾನ್ಯ ಮನುಷ್ಯನಿಗೂ ವಸತಿ ಸೌಕರ್ಯವನ್ನು ಏರ್ಪಡಿಸಲು, ಸಣ್ಣ ಉದ್ಯಮಗಳನ್ನು ಅಭಿವೃದ್ಧಿಪಡಿಸಲು ಹಾಗೂ ರೈತರ ಅಭ್ಯುದಯದ ದೃಷ್ಟಿಯಿಂದ ಈ ದೇಶಕ್ಕೆ ಒಂದು ಹೊಸ ಆರ್ಥಿಕ ನೀತಿಯನ್ನು ಹಾಕಿಕೊಟ್ಟವರು ಎಂದರೆ ೨½ ವರ್ಷಗಳ ಕಾಲ ಆಡಳಿತ ಮಾಡಿದಂಥ ಜನತಾ ಪಕ್ಷದ ಸರ್ಕಾರ. ಆ ದಿಶೆಯಲ್ಲಿ ಅವರು ಕಾರ್ಯಪ್ರವೃತ್ತರಾಗಿದ್ದರು. ಅಷ್ಟರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಸರ್ಕಾರದಿಂದ ಹಾಗೂ ಅವರ ಕಾರ್ಯಕ್ರಮಗಳಿಂದ ಹುಟ್ಟಿದಂಥ ಆರ್ಥಿಕ ವಿಷವನ್ನು ನುಂಗುವುದಕ್ಕೆ ಸಾಧ್ಯವಾಗದೇ ಇದ್ದುದಕ್ಕಾಗಿ ಆ ಸರ್ಕಾರ ಬಿದ್ದುಹೋಯಿತು. ಇವತ್ತಿನ ದಿವಸ ಅವರ ಮೂಲಭೂತವಾದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ನಿಲುವುಗಳನ್ನು ಹಾಗೂ ಧೋರಣೆಗಳನ್ನು ಗಣನೆಗೆ ತೆಗೆದುಕೊಳ್ಳದೇ ಅವುಗಳ ಮೇಲೆ ಗೂಬೆ ಕೂರಿಸಿ ನೀವು ಪಾರಾಗುವುದಕ್ಕೋಸ್ಕರ ಪ್ರಯತ್ನ

ಮಾಡುತ್ತಿದ್ದೀರಿ. ಇವತ್ತು ಹಳ್ಳಿಗಳ ಏಳಿಗೆ, ಬಡಜನರ ಏಳಿಗೆಯನ್ನು ನಾವು ಮಾಡಿದ್ದೇವೆ: ಆದ್ದರಿಂದಲೇ ನಮಗೆ ಜನ ಓಟು ಕೊಟ್ಟಿದ್ದಾರೆ; ಜನರಿಗೆ ಎಮರ್‌ಜೆನ್ಸಿ ಕತೆಯನ್ನು ಹೇಳಿದರೂ ಕೂಡ ಜನ ನಮಗೆ ಓಟು ಕೊಟ್ಟಿದ್ದಾರೆ; ಗುಲ್ಬರ್ಗದಲ್ಲಿ ನಡೆದಂಥ ಚುನಾವಣೆಯಲ್ಲೂ ಕೂಡ ಜನತೆ ನಮಗೇ ಓಟು ಕೊಟ್ಟರು ಎಂದು ಮಾನ್ಯ ಅರ್ಥ ಸಚಿವರಾದ ವೀರಪ್ಪ ಮೊಯಿಲಿಯವರು ಹೇಳಿದ್ದಾರೆ. ಇವತ್ತು ಎಲ್ಲರೂ ಆ ರೀತಿ ತುತ್ತೂರಿ ಊದುತ್ತಿದ್ದಾರೆ. ಒಂದು ವಿಷಯವನ್ನು ನಾನು ಹೇಳುತ್ತೇನೆ, ಈ ಹಳ್ಳಿಗಳ ಹಾಗೂ ಬಡಜನರ ಏಳಿಗೆ ಶ್ರೀಮಾನ್ ದೇವರಾಜ ಅರಸರ ಸರ್ಕಾರದಿಂದ ಆಯಿತು ಎಂದು ಇವತ್ತಲ್ಲ ನಾಳೆ ಜನರಿಗೆ ಅರ್ಥವಾಗುತ್ತದೆ. ಆದ್ದರಿಂದ ಇವತ್ತು ನಾನು ಹೇಳುವುದೇನೆಂದರೆ, ನಿಮ್ಮ ಈ ತುತ್ತೂರಿ ಬಹಳ ದಿವಸ ನಡೆಯುವುದಿಲ್ಲ. ನಮ್ಮ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಒಂದೇ ಮಾತಿನಲ್ಲಿ ಹೇಳಿಬಿಟ್ಟಿದ್ದಾರೆ; 'ಲೋಕಸಭಾ ಚುನಾವಣೆಗಳ ಫಲಿತಾಂಶದಿಂದಾಗಿ ನಮ್ಮ ರಾಜ್ಯ ಸರ್ಕಾರದಲ್ಲಿಯೂ ಬದಲಾವಣೆಯುಂಟಾಗಿ ಈಗ ಕಾಂಗ್ರೆಸ್ (ಐ) ಪಕ್ಷವು ಸರ್ಕಾರವನ್ನು ರಚಿಸಿದೆ' ಎಂದು ಹೇಳಿದ್ದಾರೆ. ಇವತ್ತು ರಾಜ್ಯದಲ್ಲಿ ಕಾಂಗ್ರೆಸ್ (ಐ) ಪಕ್ಷವು ಸರ್ಕಾರವನ್ನು ರಚಿಸಿದ್ದರೂ ಕೂಡ ಇವತ್ತು ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮುಷ್ಕರಗಳು ಚಳುವಳಿಗಳು, ಜಾತೀಯ ಗೊಂದಲಗಳು ನಡೆಯುತ್ತಾ ಇವೆ. ಮೂಲತಃ ನಮ್ಮಲ್ಲಿ ಆರ್ಥಿಕ ವಿಷಮತೆ ಇರುವುದೇ ಇದೆಲ್ಲದಕ್ಕೂ ಕಾರಣವಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ, ಈ ಆರ್ಥಿಕ ವಿಷಮತೆ ಇಡೀ ರಾಷ್ಟ್ರದ ಕತ್ತನ್ನು ಹಿಡಿದು ಹಿಸುಕುತ್ತಾ ಇದೆ. ಈ ಸಮಾಜದಲ್ಲಿ ಜಾತೀಯ ಗೊಂದಲಗಳು ಉಂಟಾಗಲು ಅದು ತನ್ನ ಹಿಡಿತವನ್ನು ಬಿಗಿಯುತ್ತಾ ಇದೆ. ಈ ದೇಶದಲ್ಲಿ ಮತ್ತೆ ಅಧಿಕಾರ ದ್ವಿಜರ ಕೈಗೆ ಹೋಗಿದೆ. ಕೆಲವು ತಿಂಗಳುಗಳ ಕಾಲ ಯಾರು ಅಧಿಕಾರದಿಂದ ದೂರ ಇದ್ದರೋ ಅವರೇ ಮತ್ತೆ ಜುಬ್ಬ ತೊಟ್ಟುಕೊಂಡು, ಪಂಚೆ ಉಟ್ಟುಕೊಂಡು, ನೀಟಾಗಿ ಟೋಪಿ ಹಾಕಿಕೊಂಡು ಅಧಿಕಾರಕ್ಕೆ ಬಂದಿದ್ದಾರೆ. ಅವರ ಜನಗಳೇ ಈ ಸೆಕ್ರೆಟೇರಿಯಟ್‌ನಲ್ಲಿ ಹಾಗೂ ಎಲ್ಲಾ ಕಡೆ ಆಫೀಸ್‌ಗಳಲ್ಲಿ ಕುಳಿತಿದ್ದಾರೆ. ಒಟ್ಟಿನಲ್ಲಿ ಹೇಳಬೇಕು ಎಂದರೆ, ಅಧಿಕಾರ ಇವತ್ತು ಮೇಲ್ಜಾತಿಯವರ ಕೈಗೆ ಹೋಗಿದೆ ಇದು ಕರ್ನಾಟಕ ರಾಜ್ಯದಲ್ಲಿ ಇರಬಹುದು, ಆಂಧ್ರದಲ್ಲೂ ಇರಬಹುದು. ದೆಹಲಿಯಲ್ಲಿ ಅಂತೂ ನಿಷ್ಠಾವಂತ ಆಫೀಸರ್‌ಗಳು ಈ ಮೇಲ್ಜಾತಿಯವರ ಅಧಿಕಾರದ ಸುಳಿಯಲ್ಲಿ ಸಿಕ್ಕಿಕೊಂಡು ತತ್ತರಿಸಿ ಹೋಗುತ್ತಿದ್ದಾರೆ. ಶ್ರೀ ಎನ್. ಕೆ. ಸಿಂಗ್‌ರವರ ತರಹ ಅವರೆಲ್ಲಾ ಅರೆಸ್ಟಾಗಿ ಹೋಗಬೇಕಾದ ಪರಿಸ್ಥಿತಿ ಬಂದಿದೆ. ನಾನು ದ್ವಿಜರು ಎಂದು ಹೇಳಿದೆ. ಅಂದರೆ ಅದರಲ್ಲಿ ಬ್ರಾಹ್ಮಣರು ಬಂದರು ಜನಿವಾರದವರು ಬಂದರು. ಮತ್ತು ಆಸ್ತಿ ಇರತಕ್ಕವರು ಬಂದರು ಅದರೊಳಗೆ ವಿಶೇಷವಾಗಿ ಶ್ರೀಮತಿ ಇಂದಿರಾಗಾಂಧಿಯವರು ಏನು ಮಾಡಿದರು ಅದು ಜಾತೀಯತೆ ಅಲ್ಲ ೧೬ ಜನ ಇರತಕ್ಕಂಥ ಕೇಂದ್ರ ಸಂಪುಟದಲ್ಲಿ ೭ ಜನ ಇವರನ್ನು ಇಟ್ಟುಕೊಂಡರು. ಮೊನ್ನೆ ಬಸವಲಿಂಗಪ್ಪನವರು ಮೊಗಮ್ಮಾಗಿ ಹೇಳಿದರು. ಮಾನ್ಯ ಎಂ.ಸಿ. ಬಸಪ್ಪನವರು, ಮಾನ್ಯ ಶ್ರೀಕಂಠಯ್ಯನವರು, ಮಾನ್ಯ ಪ್ರಭಾಕರ್‌ರವರು ಇರತಕ್ಕಂಥ ಈ ರಾಜ್ಯದಲ್ಲಿ ಮಾನ್ಯ ಗುಂಡೂರಾಯರು ಚೀಫ್ ಮಿನಿಸ್ಟರ್ ಆಗುವುದು ಹೇಗೆ, ಲಿಂಗಾಯಿತರಾಗಲಿ, ಒಕ್ಕಲಿಗರಾಗಲಿ ಮುಖ್ಯ ಮಂತ್ರಿ ಆಗದೆ ಒಬ್ಬ ಬ್ರಾಹ್ಮಣರು ಮುಖ್ಯ ಮಂತ್ರಿಯಾದರು ಎಂದು ಹೇಳಲಾರದೆ ಸುತ್ತಿ ಬಳಸಿ ಹೇಳಿದರು. ಈ ಜಾತಿಯ ವಿಷಮತೆ, ಈ ಜಾತಿಗಳ ವಿರುದ್ಧವಾಗಿ ಹೋರಾಟ ಮಾಡಬೇಕಾದರೆ ಕೆಲವುಸಾರಿ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಈಗ ನಮ್ಮ ರಾಜ್ಯದಲ್ಲಿ ಹೆಚ್ಚು ಕಡಿಮೆ ಅನುಭವಿಗಳು ಮತ್ತು ಆಡಳಿತದ ವಿಚಾರ ಗೊತ್ತಿಲ್ಲದೆ ಇರತಕ್ಕ ಜನ ಅಧಿಕಾರಕ್ಕೆ ಬಂದಿದ್ದಾರೆ. ಈಗ ಮುಖ್ಯ ಮಂತ್ರಿಗಳಾಗಿರತಕ್ಕವರು ಹಿಂದಿನ ಮಂತ್ರಿ ಮಂಡಲದಲ್ಲಿದ್ದರು. ಈಗ ನಮ್ಮ ಮುಖ್ಯ ಮಂತ್ರಿಗಳು ಯುವ ಮುಖ್ಯ ಮಂತ್ರಿಗಳು ಎಂದು ಹೊಗಳುತ್ತಾರೆ. ನಾನು ಮೊನ್ನೆ ಪ್ರಜಾಮತ ಪತ್ರಿಕೆಯನ್ನು ನೋಡಿದೆ. ಅದು ಇಲ್ಲೇ ಎಲ್ಲೋ ಇತ್ತು, ಸಿಕ್ಕಿತ್ತು, ಈ ಪ್ರಜಾಮತ ಪತ್ರಿಕೆಯ ಮುಖ ಪುಟದಲ್ಲಿ ಮೂರು ಜನರ ಫೋಟೋ ಹಾಕಿದ್ದಾರೆ. ಶ್ರೀಮಾನ್ ವೀರಪ್ಪ ಮೊಯಿಲಿಯವರ, ಶ್ರೀಮಾನ್ ಬಂಗಾರಪ್ಪನವರ ಮತ್ತು ಶ್ರೀಮಾನ್ ಗುಂಡೂರಾಯರ ಫೋಟೋಗಳನ್ನು ಹಾಕಿದ್ದಾರೆ. ಈ ಫೋಟೋಗಳ ಮೇಲೆ ಕ್ಯಾಪ್‌ಷನ್ ಇಲ್ಲದೇ ಇರುವುದರಿಂದ ಇದೇನು ನಾಟಕದ ಕಂಪನಿಯೋ ಅಥವಾ ಸರ್ಕಸ್ಸೋ, ಆಮೇಲೆ ಒಳಗೆ ನೋಡುತ್ತೇನೆ ಅಧ್ಯಕ್ಷರೇ, ಇದನ್ನು ನೋಡಿದ ತಕ್ಷಣ ಭಯ, ನಡುಕ ಬಂದುಬಿಟ್ಟಿತು. ಇದೇನು ಚಂಬಲ್ ವ್ಯಾಲೀದು ಏನಾದರೂ ಬಂತೆ ಎಂದು ಅನುಮಾನ ಬಂತು. ಆಮೇಲೆ ನೋಡಿದರೆ ಶ್ರೀಮಾನ್ ಗುಂಡೂರಾಯರ ಫೋಟೋ. ಅವರು ನೋಡುವುದಕ್ಕೆ ಇಷ್ಟು ಕೆಟ್ಟಿಲ್ಲ. ಈ ರೀತಿಯಾದಂಥ ಫೋಟೋ ಹಾಕಬಾರದು, ಈ ಫೋಟೋ ದ್ವಾನವಾಗಿದೆ.

ಶ್ರೀ ಎಸ್.ಎಸ್. ಅರಕೇರಿ.—ಆ ೩ ಜನರ ಫೋಟೋಗಳು ಬ್ರಹ್ಮ, ವಿಷ್ಣು, ಮಹೇಶ್ವರರದು.

ಶ್ರೀ ಜೆ.ಎಚ್ ಪಟೇಲ್.—ಇವರೆಲ್ಲಾ ಯುವಕರಿದ್ದಾರೆ, ಚೆನ್ನಾಗಿ ಕೆಲಸಮಾಡಲಿ. ಶ್ರೀಮಾನ್ ಬಂಗಾರಪ್ಪನವರ, ಶ್ರೀಮಾನ್ ಗುಂಡೂರಾಯರ ಮತ್ತು ಶ್ರೀಮಾನ್ ವೀರಪ್ಪಮೊಯ್ಲಿಯವರ ಬಗ್ಗೆ ನನಗೆ ವೈಯಕ್ತಿಕವಾಗಿ ವಿಶ್ವಾಸವಿದೆ, ಅಭಿಮಾನವಿದೆ ಆದರೆ ರಾಜ್ಯದ ಮುಂದಿರತಕ್ಕ ಜವಾಬ್ದಾರಿ ಏನಿದೆ ಆ ಜವಾಬ್ದಾರಿಯನ್ನು ಹೊರತಕ್ಕ ಎದೆಗಾರಿಕೆ, ಶಕ್ತಿ ಮತ್ತು ಬುದ್ಧಿಬೇಕು. ಇದನ್ನು ತೋರಿಸ ಬೇಕಾದರೆ, ಅವರು ಬಂದ ಕೆಲವು ದಿವಸಗಳಲ್ಲಿ ಈ ರಾಜ್ಯಪಾಲರ ಭಾಷಣದಲ್ಲಿ ಏನಾದರೂ ಸ್ವಲ್ಪ ನಮ್ಮ ರಾಜ್ಯದ ಸಮಸ್ಯೆಗಳೇನು ಎನ್ನುವುದರ ಕಲ್ಪನೆ ಇರಬೇಕಾಗಿತ್ತು. ಅವರಿಗೆ ಬುದ್ಧಿ ಇದೆ, ಆ ಬುದ್ಧಿ ನಾನಾ ರೀತಿಯಲ್ಲಿದೆ. ಆ ರೀತಿ ಬುದ್ಧಿ ಇಲ್ಲಿದೇ ಇದ್ದಿದ್ದರೆ ಅವರೇಕೆ ಈಗ ಆ ಕಡೆ ಹೋಗುತ್ತಿದ್ದರು. ಆದರೆ ಬುದ್ಧಿ ಏನೇ ಇರಲಿ. ಆ ಬುದ್ಧಿಯನ್ನು ನಮ್ಮ ರಾಜ್ಯದ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಅನುಕೂಲವಾಗುವುದರಲ್ಲಿ ಉಪಯೋಗಿಸಬೇಕು. ನಾನು ಒಂದೇ ಮಾತಿನಲ್ಲಿ ಹೇಳುವುದಾದರೆ, ಇವತ್ತು ರೈತರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಪಟ್ಟಣಗಳಲ್ಲಿರತಕ್ಕ ಕಾರ್ಮಿಕರು ಮತ್ತು ಬಡ ಕೂಲಿಗಾರರು ಎಣ್ಣೆ, ಸೀಮೆಎಣ್ಣೆ, ಸಕ್ಕರೆ ವಿಷಯ ಮಾತನಾಡುತ್ತಾರೆ. ವಾಸ್ತವವಾಗಿ ಹೇಳುವುದಾದರೆ, ನಮ್ಮ ಹಳ್ಳಿಗಾಡಿನಲ್ಲಿ ಸೀಮೆಎಣ್ಣೆ ಸಿಕ್ಕದೇ ಇದ್ದರೂ ತೊಂದರೆಯಾಗುವುದಿಲ್ಲ. ಏಕೆಂದರೆ, ಅವರು ಆರು, ಆರೂವರೆ ಗಂಟೆಯೊಳಗೆ ಮನೆಗೆ ಬಂದು ಖಾರ ಅರೆದುಕೊಂಡು ಮುದ್ದೆ, ರೊಟ್ಟಿ ಊಟಮಾಡಿಕೊಂಡು ಮಲಗಿ ಬಿಡುತ್ತಾರೆ. ಓದುವ ಮಕ್ಕಳು ಇದ್ದರೆ ಬೆಳಕು ಬೇಕಾಗುತ್ತದೆ. ಅವರನ್ನು ದನ ಕಾಯುವುದಕ್ಕೆ ಹಾಕಿರುತ್ತಾರೆ. ಆದ್ದರಿಂದ ಸೀಮೆಎಣ್ಣೆ ಇಲ್ಲದೇ ಇದ್ದರೂ ಪರ್ವಾಗಿಲ್ಲ. ಮತ್ತೆ ಹಳ್ಳಿಗಾಡಿನಲ್ಲಿರತಕ್ಕ ಮತ್ತು ಕೂಲಿ ಮಾಡತಕ್ಕ ಜನ ಸಕ್ಕರೆ ತಿನ್ನುವುದಿಲ್ಲ. ಸಕ್ಕರೆ ಮತ್ತು ಸೀಮೆಎಣ್ಣೆ ಅಭಾವದ ಬಿಸಿ ತಕ್ಷಣ ಯಾರಿಗೆ ತಗಲುತ್ತದೆ ಅಂದರೆ, ಪಟ್ಟಣದಲ್ಲಿರತಕ್ಕ ಮಧ್ಯಮ ವರ್ಗದವರಿಗೆ, ಕಾರ್ಮಿಕರಿಗೆ, ಮಿಲ್ಲಿನ ಕಾರ್ಮಿಕರಿಗೆ, ಸರ್ಕಾರಿ ನೌಕರರಿಗೆ ತಗಲುತ್ತದೆ. ಹಳ್ಳಿಗಾಡಿನ ಜನರಿಗೆ ನಿಜವಾಗಿಯೂ ತೊಂದರೆ ಯಾವಾಗ ಅಂದರೆ ಖಾರ, ಉಪ್ಪು, ಹುಣಸೇಹಣ್ಣು, ಮೆಣಸಿನಕಾಯಿ ಇಂಥವು ದುಬಾರಿ ಆದಾಗ ಹಳ್ಳಿಗಾಡಿನ ಜನರಿಗೆ ಶಾಖ ತಗಲುತ್ತದೆ. ಬಂಗಾರ ದುಬಾರಿಯಾದರೆ ಅವರಿಗೇನೂ ಆಗುವುದಿಲ್ಲ. ಕೆಲವು ದಿವಸಗಳ ಹಿಂದೆ ಬಂಗಾರ ದುಬಾರಿ ಆಯಿತು. ಲಗ್ನ ಮಾಡುವವರಿಗೆ, ತಾಳಿ ಕಟ್ಟುವವರಿಗೆ ಸ್ವಲ್ಪ ತೊಂದರೆಯಾಗುತ್ತದೆಯೇ ಹೊರತು ಅನು ಅಂಥಾ ಮೂಲಭೂತ ಸಮಸ್ಯೆಯಲ್ಲ. ಹೋದ ವರ್ಷ ಇದೇ ರಾಜ್ಯಪಾಲರ ಭಾಷಣದ ಫಸ್ಟ್ ಪೇಜಿನಲ್ಲಿ ಹೀಗೆ ಹೇಳಿದ್ದಾರೆ, ಅವರ ಭಾಷೆಯಲ್ಲೇ ಹೇಳುವುದಾದರೆ,

> "we are therefore concerned with shifting out out look from handling the problems of shortage to one, quite suddenly, of plenty"

ಪ್ಲೆಂಟಿ ಆಗಿರುವುದನ್ನು ಹೇಗೆ ಎದುರಿಸಬೇಕು ಎಂದು ಹೇಳಿದ್ದಾರೆ. ಈಗ ಅದೇ ರಾಜ್ಯಪಾಲರು ೧೯೮೦ರ ಭಾಷಣದಲ್ಲಿ

> "My Government have accorded the highest priority to bringing down the prices of essential commodities like food grains, sugar, vegetable oil and kerosene, which during the last few months, unfortunately, showed a sudden rise."

ಎಂದು ಹೇಳಿದ್ದಾರೆ. ಒಂದೇ ವರ್ಷದಲ್ಲಿ ಸೀನರಿ, ಪರದೆ ಬದಲಾವಣೆಯಾಗಿದೆ. ಈಗ ರಾಜಮಹಾರಾಜರುಗಳು, ಚಕ್ರವರ್ತಿಗಳು ಸಿಂಹಾಸನಾರೂಢರಾಗಿದ್ದಾರೆ. ಮುಂದಿನ ಸ್ಥಿತಿ ಏನು ? ಮುಂದಿನ ಗತಿಯೇನು ? ಒಂದು ಮಾತಿನಲ್ಲಿ ಹೇಳುವುದಾದರೆ, ವಿಧಾನಸಭೆ ಡಿಸಲ್ಯೂಷನ್ ಆಗಬೇಕಾಗಿತ್ತು. ಮಾನ್ಯ ಎಂ.ಸಿ. ಬಸಪ್ಪನವರು ಏನು ಹೇಳಿದರು ಅದನ್ನು ನಾನು ಒಪ್ಪುತೇನೆ. ನಿಜವಾಗಲೂ ಜನರ ಮುಂದೆಹೋಗಬೇಕಾಗಿತ್ತು. ಶ್ರೀಮತಿ ಇಂದಿರಾಗಾಂಧಿಯವರಿಗೆ ಓಟ್ ಕೊಟ್ಟರೇ ಹೊರತು ಜನಗಳು ಶ್ರೀಮಾನ್ ಗುಂಡೂರಾವ್ ಅವರು ಚೀಫ್ ಮಿನಿಸ್ಟರ್ ಆಗಬೇಕು ಎಂದು ಹೇಳಲಿಲ್ಲ. ಎಲ್ಲರೂ ಜನರ ಮುಂದೆ ಹೋಗಬೇಕಾಗಿತ್ತು. ಜನರು ಏನು ಹೇಳುತ್ತಿದ್ದರೋ ನೋಡಬಹುದಾಗಿತ್ತು. ಶ್ರೀಮಾನ್ ಗುಂಡೂರಾವ್ ಅವರು ಚೀಫ್ ಮಿನಿಸ್ಟರ್ ಆಗಬೇಕ ಎಂದು ಜನರ ಅಭಿಪ್ರಾಯವಾಗಿದ್ದರೆ, ಆಗುತ್ತಿದ ರು ಈಗ ಆಗಿದ್ದಾರೆ. ಶ್ರೀಮಾನ್

ಬಂಗಾರಪ್ಪನವರು, ಶ್ರೀಮಾನ್ ವೀರಪ್ಪಮೊಯ್ಲಿಯವರು ಅವರ ಜೊತೆಯಲ್ಲಿದ್ದಾರೆ. ಮಾನ್ಯ ಬಂಗಾರಪ್ಪನವರನ್ನು ಬಿಡುತ್ತಾರೋ ಏನೊ ಗೊತ್ತಿಲ್ಲ, ಏಕೆಂದರೆ, ಅವರು ಬಹಳ ತೊಂದರೆಯಲ್ಲಿದ್ದಾರೆ. ಶ್ರೀಮಾನ್ ಬಂಗಾರಪ್ಪನವರು ನಮ್ಮ ಜಿಲ್ಲೆಯವರು. ಬಹಳ ಹಿಂದಿನಿಂದ ಹೋರಾಟಮಾಡಿಕೊಂಡು ಬಂದವರು. ಅವರ ಜಿಲ್ಲೆಯಲ್ಲೇ ಮಾನ್ಯ ಮುಖ್ಯ ಮಂತ್ರಿಗಳಿಗೆ ಸನ್ಮಾನ ಮಾಡಿದರು. ಸನ್ಮಾನ ಮಾಡಿದರೆ ಇವರನ್ನು ಬಿಟ್ಟು ಬಿಡುವುದೇ. ಇವರನ್ನು ಯಾವ ಊರಿನವರು ಎಂದು ಕೇಳಲಿಲ್ಲ. ಅದು ಹಾಗಾಯಿತು. ಅವರು ಪ್ರಾದೇಶಿಕ ಅಧ್ಯಕ್ಷರು, ಈಗ ಅಧ್ಯಕ್ಷ ಗಿರಿಯನ್ನೂ ತೆಗೆಯುತ್ತಾರೆ ಎಂದು ಮಾನ್ಯ ಬಸವಲಿಂಗಪ್ಪನವರು ಹೇಳುತ್ತಾ ಇದ್ದರು. ಹೀಗಾಗಿ ಮಂತ್ರಿಮಂಡಲದಲ್ಲಿ ಸಾಮರಸ್ಯವಿಲ್ಲ, ಆರ್ಥಿಕ ನೀತಿಯಿಲ್ಲ, ಸಾಮಾಜಿಕ ಉದ್ದೇಶವಿಲ್ಲ. ಬೇಕಾದರೆ ಇದನ್ನು ನಾನು ರುಜುಮಾತು ಮಾಡಿಕೊಡುತ್ತೇನೆ. ಇನ್ನು ಅಧಿಕಾರಿಗಳ ವರ್ಗಾವರ್ಗಿಯನ್ನು ಮಾಡಿದ್ದಾರೆ. ಮುಖ್ಯ ಸ್ಥಾನಗಳಿಗೆ ತಮಗೆ ಬೇಕಾದಂತಹ ವರನ್ನು ತಂದು ಹಾಕಿದ್ದಾರೆ.

SRI H.D. DEVE GOWDA.—You want fresh-minded people.

ಶ್ರೀ ಜೆ.ಎಚ್. ಪಟೇಲ್.—ಅವರಿಗೆ ಮತ್ತೆ ಜನ ಓಟ್ ಕೊಟ್ಟರೆ ಜನರ ತೀರ್ಮಾನವನ್ನು ಒಪ್ಪಲೇಬೇಕು.

ಶ್ರೀ ಎಚ್.ಡಿ. ದೇವೇಗೌಡ.—ಹೊಟ್ಟೆಪಾಡು ಸ್ವಾಮಿ, ನೀವು ಮೊದಲೇ ಹೇಳಿದಿರಲ್ಲ.

ಶ್ರೀ ಜೆ.ಎಚ್. ಪಟೇಲ್.—ನಾನು ಆ ಕಡೆ ಇದ್ದಾಗ ಈ ಕಡೆ ಹೇಳಿದೆ, ಈ ಕಡೆ ಇದ್ದಾಗ ಆ ಕಡೆ ಹೇಳುತ್ತಿದ್ದೇನೆ. ನಿಮಗೇಕೆ ಸಿಟ್ಟು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಆ ಕಡೆ ಕೂತಾಗ ಈ ಕಡೆ ಹೇಳುತ್ತಾರೆ, ಈ ಕಡೆ ಕೂತಾಗ ಆ ಕಡೆ ಹೇಳುತ್ತಾರೆ. ಎರಡೂ ಕಡೆ ಒಂದೇ ಸಾರಿ ಬರುವುದಿಲ್ಲ. ಒಂದೊಂದು ಸಾರಿ ಜಾಗ ನೋಡಿಕೊಂಡು ಹೇಳುತ್ತಾರೆ.

ಶ್ರೀ ಜೆ. ಎಚ್. ಪಟೇಲ್.—ಏನು ಮಾಡುವುದು, ನಾನು ಎಂದೂ ಪಾರ್ಟಿ ಬದಲಾವಣೆ ಮಾಡುವವನಲ್ಲ, ಯಾವಾಗಲೂ ಖಾಯಂ ಆಗಿರತಕ್ಕವನು. ದುರದೃಷ್ಟವೋ ಏನೋ, ಮಾನ್ಯ ಬಸವಲಿಂಗಪ್ಪನವರ ಜೊತೆಯಲ್ಲಿ ಸೇರಿದರೆ ಅವರೂ ನನ್ನ ಜೊತೆಯಲ್ಲಿ ವಾಪಸ್ಸು ಬಂದುಬಿಡುವುದೇ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಈ ಸಮಾಜವಾದಿಗಳ ಬಗ್ಗೆ ನಾನು ಈಗಾಗಲೇ ಮಾತನಾಡುವಾಗ ಹೇಳಿದ್ದೇನೆ. ಯಾರು ಈ ಸಮಾಜವಾದಿಗಳು ಅಂತ ಇದ್ದಾರೆ ಅವರು ಇವರ ಜೊತೆಗೆ ಸೇರಿದಾಗ ಇವರು ಸ್ಥಾನ ಬಿಡುತ್ತಾರೆ. ಇವರು ನಮ್ಮ ಹತ್ತಿರ ಬಂದರು. ಬಂದ ೩ ದಿವಸಗಳೂ ಇರಲಿಲ್ಲ, ನಾವು ಇತ್ತಕಡೆಗೆ ಬಂದು ಬಿಟ್ಟೆವು. ಆದುದರಿಂದ ತಾವು ಅಲ್ಲಿಗೆ ದಯವಿಟ್ಟುಹೋಗಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಸಮಾಜವಾದಿಗಳ ಗುಂಪಿನಲ್ಲಿ ಬಹುಶಃ ಅವರು ನನ್ನನ್ನು ಸೇರಿಸಬಹುದೆಂದು ನನ್ನ ಅನಿಸಿಕೆ. ಆದರೆ ಹಿನ್ನೆಲೆಯಲ್ಲಿ ಒಂದು ಮಾತನ್ನು ಹೇಳುತ್ತೇನೆ. ಹಿಂದಿನ ಮಂತ್ರಿಮಂಡಲವಿದ್ದಾಗ ಅವರು ಇತ್ತ ಕಡೆಗೆ ಬಂದ ಮೇಲೆ ಅದು ಹೋಯಿತು. ಈಗ ಪುನಃ ನಾನು ಇತ್ತಕಡೆಗೆ ಬಂದ ಮೇಲೆ ಬೇರೆ ರಚನೆಯಾಗಿದೆ.

ಶ್ರೀ ಜೆ.ಎಚ್. ಪಟೇಲ್.—ಹೀಗಾಗಿ ಅಧ್ಯಕ್ಷರೇ, ಇವತ್ತು ಬಹಳ ಗಂಭೀರವಾದ ಪರಿಸ್ಥಿತಿ ಏನಿದೆ ಎಂದರೆ, ಇವತ್ತು ನಮ್ಮ ರಾಜ್ಯದಲ್ಲಿ ಆಡಳಿತ ಕುಸಿದು ಬೀಳುತ್ತಿದೆ. ಕೆಲವೇ ಜನ ದ್ವಿಜರ ಕೈಯಲ್ಲಿ ಆಡಳಿತ ಸಿಕ್ಕಿ ಹಾಕಿಕೊಂಡಿದೆ. ಅದನ್ನು ಸಾಬೀತು ಪಡಿಸಿ ಹೇಳಬಲ್ಲೆ. ದ್ವಿಜರ ಕೈಯಲ್ಲಿರುವುದರಿಂದ ಸೆಕ್ರೆಟರಿಯೇಟ್‌ನಲ್ಲಿ, ಯಾವ ಹಂತದಲ್ಲಿಯಾಗಲೀ ಕೆಲಸಗಳು ಆಗಬೇಕಾಗಿದೆ. ಇವತ್ತು ತಾಲ್ಲೂಕ್ ಲೆವಲ್ ನಲ್ಲಿ ಹಿಂದುಳಿದ ಜಾತಿಯ ಅಧಿಕಾರಿಗಳು ಯಾರಿದ್ದಾರೆ ಅವರಿಗೆ ಒಂದು ರೀತಿಯ ಸೆನ್ಸ್ ಆಫ್ ಇನ್‌ಸಕ್ಯೂರಿಟಿ, ಅಭದ್ರ ಮನಸ್ಸು ಉಂಟಾಗಿದೆ ಏನು ಮಾಡಿದರೆ ಏನಾಗುತ್ತದೆಯೋ ಎನ್ನುವ ಭಯ ಉಂಟಾಗಿದೆ. ಈಗ ಇದ್ದಕ್ಕಿದ್ದ ಹಾಗೆ ಎಲ್ಲೆಲ್ಲೂ ಕಾಂಗ್ರೆಸ್ಸಿನ ಮಹಾನ್ ನಾಯಕರುಗಳು ಹುಟ್ಟಿ ಬರುತ್ತಿದ್ದಾರೆ. ಆತಂಕವೇನೆಂದರೆ, ರಾವ್‌ರವರು ಸಿಂಗ್ ರವರುಗಳನ್ನು ನೋಡುವುದಕ್ಕಾಗುವುದಿಲ್ಲ. ಎರಡು ಕಣ್ಣು ಸಾಲದು. ಹೆಲಿಕ್ಯಾಫ್ಟರ್‌ನಲ್ಲಿ ಭಾಲ್ಕಿಯಲ್ಲಿ ಬಂದು ಇಳಿದರು ನೋಡಿ ಆಗ ಒಂದು ಶುಭಸೂಚನೆ ಅಂತ ಅಲ್ಲಿಯ ಜನರಿಗೆ ಇನ್ನು ಮುಂದೆ ಇಂಥಾ ಸನ್ಮಾನ ಮಾಡುವುದಕ್ಕೆ ಹೋದರೆ

ಹೇಗೆ ಆಗುತ್ತದೆ ಅಂತ ಪ್ರಕೃತಿ ತೋರಿಸಿ ಕೊಟ್ಟಿದೆ. ಮತ್ತೊಂದು ಕಡೆ ಯಾರೋ ಒಬ್ಬ ಮಂತ್ರಿ ಶ್ರೀ ಇಬ್ರಾಹಿಂರವರು ನನಗೇ ಆಶ್ಚರ್ಯ ಇಂಗ್ಲೀಷ್‌ನಲ್ಲಿ ಮಾತನಾಡುವುದಕ್ಕೆ ಶುರು ಮಾಡಿದರು ನಾನು ಏನಾದರೂ ತಡೆದುಕೊಳ್ಳುತ್ತೇನೆ, ನನಗೆ ಸ್ವಲ್ಪ ಹೊಟ್ಟೆ ಕಾಯಿಲೆ, ಏನಾದರೂ ಟೆನ್‌ಷನ್ ಸಂದರ್ಭ ಬಂದಾಗ ಹೊಟ್ಟೆ ಮುರಿತ ಶುರುವಾಗುತ್ತದೆ, ಅವರು ಇಂಗ್ಲೀಷ್ ಮಾತನಾಡಿದ್ದನ್ನು ಕೇಳಿ ನಿಜವಾಗಿಯೂ ನನಗೆ ಬಹಳ ಹೊಟ್ಟೆ ಮುರಿತ ಶುರುವಾಯಿತು. ಅದಕ್ಕೆ ಯಾವ ಔಷಧ ತೆಗೆದುಕೊಳ್ಳಬೇಕೋ ನನಗೆ ಗೊತ್ತಾಗಲಿಲ್ಲ. ಮಾನ್ಯ ಮಂತ್ರಿಗಳವರು ಹೇಳಿದರು ಮಾನ ಇದ್ದವರಿಗೆ ಸನ್ಮಾನ ಮಾಡುತ್ತಾರೆ, ಇಲ್ಲದಿದ್ದರೆ ಯಾರಿಗೆ ಮಾಡುತ್ತಾರೆ ಎಂದು. ಅವರ ಮಾನವನ್ನು ಯಾವ ದಂಡದಲ್ಲಿ ಅಳೆಯಬೇಕೋ ಗೊತ್ತಾಗಲಿಲ್ಲ, ಅದು ಸಿಕ್ಕಿದರೆ ಅಳೆಯುತ್ತಿದ್ದೆ, ಅದನ್ನು ಅಳೆಯುವುದಕ್ಕೆ ಅಸೆಂಬ್ಲಿ ಚುನಾವಣೆಗಳು ಇವೆ, ಈಗಲ್ಲಾ ನಾಳೆ ಆಗುತ್ತದೆ. ಆಗ ಯಾರ ಮಾನ ಎಷ್ಟೆಷ್ಟಿದೆಂಬುದನ್ನು ನೋಡೋಣ. ಇವತ್ತು ಏನೂ ಬದಲಾವಣೆಯಾಗಿಲ್ಲ. ಪ್ರಜಾ ತಂತ್ರದಲ್ಲಿ ಇದು ಪೂರ್ಣವಾಗಿ ಸ್ಥಗಿತವಾಗಿದೆ. ಸುಭದ್ರ ಸರ್ಕಾರ ಅಂತ ಹೇಳತಕ್ಕ ಜನರ ಪ್ರಜಾಪ್ರಭುತ್ವ ಕಲ್ಪನೆಯಲ್ಲ ಇವತ್ತು ಜಯಾಉಲ್ ಹಕ್‌ರವರ ಸರ್ಕಾರದಂಥ ಸುಭದ್ರ ಸರ್ಕಾರ ಇವರಿಗೆ ಬೇಕಾಗಿದೆ. ಅಂಥಾ ಸರ್ಕಾರವೇ ನಮಗೆ ಬೇಕಾಗಿರುವುದು ಇವತ್ತು ಸುಭದ್ರ ಸರ್ಕಾರವಾಗದಿದ್ದರೂ ಪರವಾಗಿಲ್ಲ ಸುಭದ್ರ ಸಮಾಜವಾದರೆ ಪರವಾಗಿಲ್ಲ. ಪ್ರಧಾನ ಮಂತ್ರಿಗಳವರನ್ನು ೨-೩ ವರ್ಷಗಳಿಗೊಮ್ಮೆ ಬದಲಾವಣೆ ಮಾಡುವುದಕ್ಕೆ ಆಗದಿದ್ದರೂ ಪರವಾಗಿಲ್ಲ ೨-೩ ವರ್ಷಕ್ಕೊಮ್ಮೆ ಮುಖ್ಯಮಂತ್ರಿಗಳವರನ್ನು ಬದಲಾವಣೆ ಮಾಡಬೇಕಾಗಿದೆ. ಇಲ್ಲದಿದ್ದರೆ ಆಗ ಸುಭದ್ರ ಸರ್ಕಾರ ಜನರ ತಲೆಯ ಮೇಲೆ ಕಲ್ಲನ್ನು ಹೇರುವುದಕ್ಕೆ ಅನುಕೂಲವಾಗುತ್ತದೆ. ಸುಭದ್ರ ಸರ್ಕಾರ, ನಾವು ಬಡವರಿಗೋಸ್ಕರ ಕೆಲಸ ಮಾಡುತ್ತೇವೆಂದು ಹೇಳುತ್ತಾ ಆ ಸೋಗಿನ ಜನ ಏನಿದ್ದಾರೆ ಅವರು ಏನು ಮಾಡುತ್ತಾರೆಂದರೆ, ಅವರು ರಾಗ ಹಾಡುವುದಕ್ಕೆ ಶುರು ಮಾಡಿದರೆ, ಸ್ವರದಲ್ಲಿಯೋ ತಪ್ಪು ಮಾಡಿದರೆ ಮುಂದೆ ಯಾವ ರಾಗ ಹಾಡುತ್ತಾರೆ ಅಂತ ಕಂಡು ಹಿಡಿಯಬಹುದು. ಆದರೆ ಇವತ್ತು ಯಾವ ಸಂಗೀತ ಕಛೇರಿ ನಡೆಸಿದ ಹಾಗೆ ಕಾಣುವುದಿಲ್ಲ. ಜನರ ಮುಂದೆ ಏನು ಹೇಳುತ್ತಿರೋ. ಹೇಳಿದ ಹಾಗೆ ಮಾಡಿ, ಜನರ ಎದುರಿಗೆ ನಿಮ್ಮ ನಿಲವು ಏನಿದೆಂಬುದನ್ನು ಇಡಿ. ಆದರೆ ಇವತ್ತು ಏನಾಗಿದೆ ಎಂದರೆ, ಮೂಲೆ ಹಿಡಿದು ಕೂತಿದ್ದ ಜನ ಯಾರು ಇದ್ದರು, ಚೀಲ ಮುದುರಿಕೊಂಡು ಕುಳಿತ್ತಿದ್ದರು ಅವರು ಪುನಃ ಚೀಲವನ್ನು ತೆಗೆದು ತಮ್ಮ ಹೊಸ ಅಂಗಡಿಗಳನ್ನು ತೆಗೆದುಕೊಂಡು ಕುಳಿತ್ತಿದ್ದಾರೆ. ಯಾವುದೋ ಒಂದು ಹೊಸ ಶಕ್ತಿಯಲಿ ಬ್ರಾಹ್ಮಣ ಗುಂಡೂರಾಯರು ಮುಖ್ಯಮಂತ್ರಿಗಳಾಗಿ ಬಂದಿದ್ದಾರೆ. ಆದರೆ ಇವತ್ತು ಜನತೆ ಮತ್ತು ಮಾನ್ಯ ಮಂತ್ರಿಗಳವರು ಎಚ್ಚೆತ್ತುಕೊಳ್ಳಬೇಕಾಗಿದೆ, ಇಲ್ಲದಿದ್ದರೆ ಹೇಗೆ ಬೊಮ್ಮನ ಹಳ್ಳಿಯ ಕಿಂದರಿ ಜೋಗಿಯ ಜೊತೆಯಲ್ಲಿಯೇ ಇಲಿಗಳು ಹಳ್ಳಕ್ಕೆ ಬಿದ್ದವೋ ಹಾಗೆ ಬೀಳಬೇಕಾದ ಪರಿಸ್ಥಿತಿ ಬಂದೀತು. ಮುಂದಿನ ಭವಿಷ್ಯ ಭಯಾನಕವಾಗಿದೆ ಆದುದರಿಂದ ನಾನು ಹೇಳುವುದನ್ನು ಯಾವುದೂ ವೈಯಕ್ತಿಕವಾಗಿ ತೆಗೆದು ಕೊಳ್ಳಬೇಡಿ, ಅಬ್ಜೆಕ್ಟಿವ್ ವಿಷಯಗಳನ್ನು ತೆಗೆದುಕೊಳ್ಳಿ, ರಾಜ್ಯದ ಬಗ್ಗೆ ಹಿತಚಿಂತನೆ ಮಾಡಿ, ಒಳ್ಳೆಯ ಕೆಲಸಗಳನ್ನು ಮಾಡಿದರೆ ಜನತೆ ನಿಮ್ಮ ಜೊತೆಯಲ್ಲಿ ಇರುತ್ತಾರೆ, ಮತ್ತೆ ನೀವು ಏನಾದರೂ ೧೯೭೭ರ ಹಾಗೆ ಆ ಥಾಟಿಯಲ್ಲಿ ಹೋದರೆ ನಮ್ಮ ಎಲ್ಲ ಸರ್ವಸ್ವವನ್ನು ಮುಡುಪಾಗಿಟ್ಟು ನಿಮ್ಮನ್ನು ದಾರಿಗೆ ತರುತ್ತೇವೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

Re: Death of a Sadhu in Police custody.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಪತಿಗಳೇ, ಇನ್‌ಕ್ವೆಸ್ಟ್ ರಿಪೋರ್ಟ್‌ನ್ನು ಸಾಯಂಕಾಲ ಮಂಡಿಸುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದರು. ಆದುದರಿಂದ ಈಗ ಇಲ್ಲಿ ರಾಜಸ್ವ ಮಂತ್ರಿಗಳವರು ಮತ್ತು ಕಂದಾಯ ಮಂತ್ರಿಗಳವರೂ ಇದ್ದಾರೆ, ಅದನ್ನು ಈಗ ಮಂಡಿಸುತ್ತಾರೆಂದು ಆಶಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ನಾನು ಹೇಳಿದಂತ ಇನ್‌ಕ್ವೆಸ್ಟ್ ರಿಪೋರ್ಟ್ ಇನ್ನೂ ನಮ್ಮ ಕೈಗೆ ಸಿಕ್ಕಿಲ್ಲ. ಏತಕ್ಕೆಂದರೆ, ಪ್ರೊಸೀಜರ್ ಇರತಕ್ಕಂಥಾದ್ದು ಹೇಗೆಂದರೆ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರ್‌ರವರು ಮ್ಯಾಜಿಸ್ಟ್ರೇಟರ್‌ರವರಿಗೆ ಕಳುಹಿಸುತ್ತಾರೆ. ಅವರು ಅಲ್ಲಿಂದ ನಮಗೆ ಕಳುಹಿಸಬೇಕಾಗಿದೆ. ಆದುದರಿಂದ ಅದು ಇನ್ನೂ ಬಂದಿಲ್ಲ. ಬಂದಕೂಡಲೇ ಸಭೆಯ ಮುಂದಿಡುತ್ತೇನೆ.